
# ನೇಸರು

ತಿಂಗಳೋಲೆ

₹ 5/-

PAGES 20

FEBRUARY 2026 Nesaru Tingalole Vol. XLIV - 02



## ಶಿವರಾತ್ರಿಯಲ್ಲಿ ಶಿವಧ್ಯಾನ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# A Beautiful Evening of Music!




On Saturday, January 17, 2026, The Mysore Association, Mumbai hosted "Kaanada Vitthalu"-a special cultural program celebrating the deep musical and spiritual bond between Karnataka and Maharashtra. The program began with a traditional Ganesh Pooja and the auspicious Lighting of the Lamp, symbolizing a bright and soulful beginn- ing. This was followed by a moving prayer rendered by Dr. B.R. Manjunath (टाळ बोले चिपळीला नाच माझ्या संगे), which set a serene and devotional tone for the night.




Following the prayer, Pandit Upendra Bhat (Senior Disciple of Bharat Ratna Pt. Bhimsen Joshi) graced the stage. He opened with a powerful Ganapati Vandana, "Gananayaka Ganapate Namo," before captivating the audience with the timeless classic, "Kaanada Raja Pandharicha."

Panditji performed a soul-stirring selection of songs in Marathi, Kannada, and Hindi, including Soubhagyada Lakshmi Baramma - A divine invocation, Tunga Teeradi - A beautiful Shri Raghavendra Swami Bhajan, Majhe Maher Pandhari - The beloved Abhang by Sant Eknath, Ram Naam Ucchar - A peaceful chant for the soul. Baaje Re Muraliya Baaje - A masterful Hindi Bhajan.

The performance was elevated by a team of incredible musicians Pt. Varad Sohany - Harmonium, Pandit Shantanu Shukla - Tabla, Pandit Sandeep Sakpal - Pakhavaz, Ravindra Shenoy - Tala, Vinayak Hegde - Vocal Support, Pandit Rajendra Patankar - Compere.

The program concluded perfectly with the iconic "Mile Sur Mera Tumhara," a performance that truly brought everyone together, proving that music has no boundaries.




The programme was well compered by Smt. Ratnavati Salian and Shri. Shashikant Joshi. President Smt. Kamala and Hon. Secretary Dr. Ganapati Shankarling spoke about the Mysore Association's activities, achievements and the Centenary Celebrations.

It was a soulful night filled with devotion, culture, and incredible artistry. A heartfelt thanks to everyone who joined us and made this evening so memorable! ●

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in



ಡಾ. ಜ್ಯೋತಿ ಸತೀಶ್

ಬದುಕಿನಲ್ಲಿ ಎಲ್ಲವೂ ನಾವಂದುಕೊಂಡಂತೆ ನಡೆಯುವುದಿಲ್ಲ. ಮೇಲೊಬ್ಬ ಸೂತ್ರಧಾರನಿದ್ದಾನೆ. ಅವನಾಡಿಸಿದಂತೆ ನಾವು ಆಡುತ್ತೇವೆ. ಒಟ್ಟಾರೆ ನಾವು ಅವನ ಕೈಗೊಂಬೆಗಳು. ನಮ್ಮ ಬದುಕಿನಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ ಅವನ ಹಸ್ತಕ್ಷೇಪವಿಲ್ಲದೆ ನಡೆಯದು ಎಂದುಕೊಂಡು ಬಾಳಿದರೆ, ನಮ್ಮಷ್ಟು ಸುಖಿಗಳು ಬೇರೆ ಯಾರೂ ಇಲ್ಲ. ಪಾಲಿಗೆ ಬಂದದ್ದು ಪಂಚಾಮೃತವೆಂದೇ ಭಾವಿಸಬೇಕು. ಇಂಗ್ಲೀಷಿನಲ್ಲಿ ಒಂದು ಹೇಳಿಕೆಯಿದೆ. "Man Proposes, God Disposes" ನಾವೆಲ್ಲರೂ ನಿಮಿತ್ತ ಮಾತ್ರ, ತೃಣ ಸಮಾನ ಅನ್ನೋದನ್ನು ಮರೆತಿದ್ದೇವೆ. ಹಿರಿಯರು ಹೇಳಿದ ಹಾಗೆ ಹಣೆಬರಹವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಏನಾಗಬೇಕೆಂದು ಆ ಭಗವಂತ ಮೊದಲೇ ಬರೆದಿದ್ದಾನೋ ಅದನ್ನು ಅಳಿಸಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಕೆ. ಎಸ್. ನರಸಿಂಹ ಸ್ವಾಮಿಯವರ ಕವನದ ಸಾಲುಗಳು ಇಲ್ಲಿ ನೆನೆಪಾಗುತ್ತದೆ.

"ದೀಪವೂ ನಿನ್ನದೇ, ಗಾಳಿಯೂ ನಿನ್ನದೇ, ಆರದಿರಲಿ ಬೆಳಕು,
ಕಡಲೂ ನಿನ್ನದೇ, ಹಡಗೂ ನಿನ್ನದೇ, ಮುಳುಗದಿರಲಿ ಬದುಕು"

ಗಾಳಿ, ಕಡಲು, ಹಡಗು ಮೊದಲಾದ ಸಾಂಕೇತಿಕ ಪದಗಳ ಮುಖೇನ ಕವಿ ಇಲ್ಲಿ ಬದುಕಿನ ಏರಿಳಿತಗಳನ್ನು ಹಾಗೂ ಭಗವಂತನ ಶಕ್ತಿಯನ್ನು ವರ್ಣಿಸುವ ಅಮೋಘ ಪ್ರಯತ್ನವಿದು. ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಯ ಹುಟ್ಟು ಮತ್ತು ಸಾವನ್ನು ದೀಪ ಬೆಳಗುವುದಕ್ಕೆ ಹಾಗೆ ಆರಿಸುವುದಕ್ಕೆ ಸಮೀಕರಿಸಿದ ಕಲ್ಪನೆ ಎಷ್ಟೊಂದು ಅರ್ಥಗರ್ಭಿತವಾದುದು. ಇನ್ನೊಂದು ಕಡೆ ಭಗವಂತನಲ್ಲಿ "ಕಷ್ಟಗಳನ್ನು ಕೊಡಬೇಡ ಎನಲಾರೆ, ಆದರೆ ಆ ಕಷ್ಟಗಳನ್ನು ಸಹಿಸುವ ಸಹನೆಯನ್ನು ದಯಪಾಲಿಸು" ಎಂದು ಬೇಡಿಕೊಳ್ಳುವ ವಿನಮ್ರತೆಯೂ ಇದೆ.

ಈ ವಿನಮ್ರತೆ, ಭಕ್ತಿಯೇ ಭಗವಂತನ ಮನಸ್ಸನ್ನು ಕರಗಿಸಬಹುದು. ಅದರ ಬದಲಾಗಿ ಬದುಕಿನಲ್ಲಿ ಬರುವ ಎಲ್ಲ ಕಷ್ಟಗಳಿಗಾಗಿ ಭಗವಂತನನ್ನು ಆಪಾದನೆ ಮಾಡುತ್ತಾ ಕೂಡುವುದಲ್ಲ. ನಮ್ಮಲ್ಲಿ ಇಂದು ವಿನಮ್ರತೆಯೇ ಮಾಯವಾಗಿದೆ. ಅದರ ಸ್ಥಾನವನ್ನು 'ಕೋಪ' ಆಕ್ರಮಿಸಿಕೊಂಡಿದೆ. ಸಹನೆಯನ್ನೋದೇ ಇಲ್ಲ. ನಮ್ಮ ಸುತ್ತಮುತ್ತ ಒಮ್ಮೆ ದೃಷ್ಟಿಹಾರಿಸಿ ನೋಡಿದರೆ, ಕೋಪದ ಕೈಗೆ ಬುದ್ದಿಕೊಟ್ಟ, ಅದೆಷ್ಟೋ ಆತಂಕಕಾರಿ ಘಟನೆಗಳು ನಡೆದಿವೆ. ಒಂದು ಕ್ಷಣದ ಪ್ರತಿಕ್ರಿಯೆ ಅದೆಂಥ ಅನಾಹುತದ ಸೃಷ್ಟಿಗೆ ಕಾರಣವಾಗುತ್ತದೆ ಎನ್ನುವುದಕ್ಕೆ ಮೊನ್ನೆ ಮೊನ್ನೆ ನಡೆದ ಪ್ರೊಫೆಸರ್ ಒಬ್ಬರ ಹತ್ಯೆಯೇ ಸಾಕ್ಷಿ. ಅದಕ್ಕೆ ಹಿರಿಯರು ಹೇಳಿರೋದು "ಕೋಪದಲ್ಲಿ ಕುಯ್ದುಕೊಂಡ ಮೂಗು ಶಾಂತವಾದಾಗ ಬರುವುದೇ" ಅಂತ. ಶ್ರೀಕೃಷ್ಣ ಹೇಳುತ್ತಾನೆ ಒಂದು ಕಡೆ, "ಯಾರೂ ಎಷ್ಟೇ ಅವಹೇಳನ ಮಾಡಿದರೂ, ನಿಮ್ಮ ಮನಸ್ಸನ್ನು ನೀವು ಶಾಂತವಾಗಿಟ್ಟುಕೊಳ್ಳಿ. ಪ್ರತಿಕ್ರಿಯಿಸುವುದಕ್ಕೆ ಅವಸರಪಡಬೇಡಿ. ಪ್ರತಿಮಾತಿಗೂ ಉತ್ತರ ಪ್ರತ್ಯುತ್ತರದಿಂದ ಕೊಡಬೇಕೆಂದಿಲ್ಲ. ಕೆಲವೊಮ್ಮೆ ಮೌನವೇ ಅತ್ಯಂತ ಪ್ರಬಲಶಾಲಿಯಾದ ಉತ್ತರವಾಗಿರುತ್ತದೆ" ಎಂದು. ಅದಕ್ಕೆ ಅಲ್ಲವೇ "ಮಾತು ಬೆಳ್ಳಿ, ಮೌನ ಬಂಗಾರ" ಅಂತ ಹೋಲಿಸಿರುವುದು. ಎಲ್ಲದಕ್ಕೂ ಕೋಪವೇ ಪರಿಹಾರವಲ್ಲ. ನಮ್ಮ ವಿವೇಚನೆ ಯಾವತ್ತೂ ನಮ್ಮ ನಿಯಂತ್ರಣದಿಂದ ಕೈತಪ್ಪಿ ಹೋಗಬಾರದು. ಈ ಸಂದರ್ಭದಲ್ಲಿ ನಾವು ಸದಾ ಕೃಷ್ಣನ ತತ್ವವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ತೀರ ಕೋಪ ಅನಿವಾರ್ಯ ಅನಿಸಿದಾಗ ಮಾತ್ರ ಅದನ್ನು ಉಪಯೋಗಿಸಬೇಕು. ಕೃಷ್ಣ ಶಿಶುಪಾಲನ ನೂರು ತಪ್ಪುಗಳನ್ನು ಕ್ಷಮಿಸುತ್ತಾ ತಾಳ್ಮೆವಹಿಸಲಿಲ್ಲವೇ ಹಾಗೆ.

ಜೀವನ ನಶ್ವರವಾದುದು, ಯಾವುದೂ ಶಾಶ್ವತವಲ್ಲ ಎನ್ನುವ ಭಾವನೆ ಸದಾ ಮನಸ್ಸಿನಲ್ಲಿದ್ದರೆ, ಬದುಕಿನಲ್ಲಿ ಎದುರಾಗುವ ಅನೇಕ ಕ್ಷುಲಕ ವಿಷಯಗಳನ್ನು ನಾವು ಕಡೆಗಣಿಸಲು ತೊಡಗುತ್ತೇವೆ. ನಾವೆಲ್ಲ ಆ ಭಗವಂತನ ಸೃಷ್ಟಿಗಳು. ಪ್ರತಿಯೊಬ್ಬರ ಹೃದಯದಲ್ಲೂ ಆ ಭಗವಂತನ ವಾಸವಿದೆ. ಈ ಕಷ್ಟಗಳೆಲ್ಲ ತಾತ್ಕಾಲಿಕವಾದುದು. "ಕತ್ತಲೆ ಕಳೆದ ಮೇಲೆ ಬೆಳಕು ಹರಿಯಲೇ ಬೇಕು". ನಮ್ಮ ಸುಖದ ದಿನಗಳನ್ನು ಆಶಾವಾದದಿಂದ ಬರಮಾಡಿಕೊಳ್ಳುವ ದಿನಗಳು ಹತ್ತಿರದಲ್ಲೇ ಇದೆ. ಇವೆಲ್ಲ ಕೋಪವನ್ನು ನಿಯಂತ್ರಿಸುವ ಬಗೆಗಳು. ಇಷ್ಟನ್ನು ನಮ್ಮ ಮನಸ್ಸು ಅರಿತರೆ, ನಮ್ಮ ಬದುಕಿನ ಹಾದಿ ಸುಗಮವಾಗುತ್ತದೆ.

●

# ಪ್ರವಾಸ ವೈವಿಧ್ಯ



✍ ಡಾ. ಸುಮಾ ದ್ವಾರಕಾನಾಥ್

## ಆಸ್ಟ್ರಿಯ, ವೆನಿಸ್ ಮತ್ತು ರೋಮ್

ಬಸ್ ಪಯಣ ಮುಂದುವರೆಯಿತು. ಡ್ರೈವರ್‌ನ, ಕ್ಯಾಪ್ಟನ್ ಎಂದು ಕರೆಯಬೇಕಾಗಿತ್ತು. ದಿನವೆಲ್ಲಾ ಪಯಣಿಸಿ, ನಡುವೆ ಸಿಕ್ಕ ಪೆಟ್ರೋಲ್ ಬಂಕ್ ಅಂದರೆ ಅದೊಂದು ತಂಗುದಾಣವೇ. ಅಲ್ಲಿ ಎಲ್ಲಾ ಸೌಕರ್ಯಗಳೂ ಇದ್ದುವು. ಎಲ್ಲರೂ fresh ಆಗಿ ಮಧ್ಯಾಹ್ನದ ಊಟವನ್ನು ಅಲ್ಲೇ ಮಾಡಿದೆವು. ಬೆಳಗ್ಗೇನೇ packed food ತಂದಿದ್ದರಿಂದ ಪಕ್ಕದ ತೋಟದಲ್ಲೇ ಕೂತು ವನಭೋಜನ ಮಾಡಿದೆವು. ಅಲ್ಲೇ ಸ್ವಲ್ಪ ಓಡಾಡಿ, ಕೂತು ಜಡ್ಡು ಹಿಡಿದ ಕಾಲುಗಳಿಗೆ ಜೀವ ಕೊಟ್ಟೆವು. ಆಸ್ಟ್ರಿಯಾ ನಮ್ಮ ಮುಂದಿನ ಗಮ್ಯವಾಗಿತ್ತು. ಅದು ಯೂರೋಪಿನಲ್ಲೇ ಅತ್ಯಂತ ದೊಡ್ಡ ರಾಜ್ಯ. ಸಂಗೀತದ ಪರಂಪರೆಯಿರುವ ಲುಡ್ವಿಗ್, ಬೆತೋವನ್ ಆರ್ಕೆಸ್ಟ್ರಾಗಳಿಗೆ ಹೆಸರುವಾಸಿಯಾದ ಜಾಗ. ಡಾನುಬೆ ನದಿಯ ತಟದಲ್ಲಿದೆ, ಅದರ ರಾಜಧಾನಿ ವಿಯೆನ್ನಾ. ವಿಶ್ವ ವಿಖ್ಯಾತನಾದ ಮನಃಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ನ ಊರು. ಬೆಳಗ್ಗೆ ಟ್ರಾಮ್‌ನಲ್ಲೇ ಒಂದು round ಊರು ಸುತ್ತಿಸಿದರು. ಲಂಡನ್‌ನಲ್ಲಿ ಒಂದು ಪೌಂಡ್ ಶಾಪಿಂಗ್ ಇದೆ ಅಂದಿದ್ರು. ಹೋಗಲಾಗಿರಲಿಲ್ಲ. ನನ್ನ ಲಂಡನ್ ಕಸಿನ್ ನಮಗೆಲ್ಲಾ 25 ಪೌಂಡ್ ಉಡುಗೊರೆ ಕೊಟ್ಟಿದ್ದು.ಅಲ್ಲೇ ಚಾಕೋಲೇಟ್ ಗಳನ್ನು ಖರೀದಿ ಮಾಡಬಹುದೆಂದು ಹೇಳಿದರು. Germany ಯಿಂದ ಬಂದಿದ್ದ ವೀಣ ನಮಗೆ ಸಹಾಯ ಮಾಡಿದಳು. ಮಕ್ಕಳಿಗೆ ಚಾಕೊಲೆಟ್ ಹತ್ತಿರದಲ್ಲೇ ಇದ್ದ ರೈಲ್ವೇ ಮಾರ್ಕೆಟ್‌ನಲ್ಲಿ ಎಲ್ರೂ ಖರೀದಿಸಿದೆವು. ಸಂಜೆ ಡಾನುಬೆ ನದಿಯಲ್ಲಿ ಒಂದು ಸುತ್ತು cruiseನಲ್ಲಿ ಸುತ್ತಿಸಿದರು. ರಾತ್ರಿ ಅಲ್ಲೇ dance & dinner ಇತ್ತು. ಕುಣಿಯುವವರೆಲ್ಲಾ ಕುಣಿದರು. ಮಾರನೆ ದಿನ ದೊಡ್ಡ ಕ್ರೂಸ್ ನಲ್ಲಿ ವೆನಿಸ್ಗೆ ಹೊರಟೆವು. ಅಲ್ಲಿಯ ಐತಿಹಾಸಿಕ ಕಟ್ಟಡಗಳನ್ನು ನೋಡಿಕೊಂಡು, ನೂರಾರು ವರ್ಷಗಳಿಂದ ವಿಶ್ವಪ್ರಸಿದ್ಧವಾದ ಮುರಾನೊ ಮತ್ತು ಬುರಾನೊ glass blowing ನೋಡಲು ಹೋದೆವು. ಒಳ್ಳೆ ಮೋಂಬತ್ತಿಯ ತರಹ ಗಾಜನ್ನು ಬೆಂಕಿಗೊಡ್ಡಿ ವೈವಿಧ್ಯಮಯ ಆಕಾರಗಳನ್ನು ಕೊಡುವುದನ್ನು ನೋಡುವುದೇ ಚಂದ. ಮುಂದಿನ thrill ಗೊಂಡೋಲ. ಅದೊಂದು ಸಾಂಪ್ರದಾಯಿಕವಾದ ವೆನೆಷಿಯನ್ ದೋಣಿ. ಇಟಲಿಯ ಬೃಹತ್ ಜಲಮಾರ್ಗ ಆಕಾರದಲ್ಲಿ ಊರಿನ ಐತಿಹಾಸಿಕ ಅರಮನೆಗಳು, ಸೇತುವೆಗಳ ನಡುವೆ ಸಾಗುತ್ತದೆ. ನೀರಪಕ್ಕದಲ್ಲೇ ಐತಿಹಾಸಿಕ ಅರಮನೆಗಳು, ಪುಷ್ಪಭರಿತ ಬಾಲ್ಕನಿಗಳು, ರಮಣೀಯ ವಾತಾವರಣವನ್ನು ಸೃಷ್ಟಿಸಿದೆ. ನಾವಂತೂ 'ದೋಣಿ ಸಾಗಲಿ' ಹಾಡು ಹೇಳಿಕೊಂಡು ನೀರ ಮೇಲೆ ತೇಲಿದೆವು.ಅದೊಂದು ರೋಮಾಂಚಕ ಅನುಭವ. ಇನ್ನೊಂದು ಅಲ್ಲಿಯ ವಿಶೇಷವೆಂದರೆ footpath ನಲ್ಲೇ chair tableಗಳನ್ನು ಹಾಕಿ road side restaurant ಗಳಲ್ಲಿ ಜನಗಳೂ, ಸುತ್ತಮುತ್ತಲಿನ ದೃಶ್ಯವನ್ನು ನೋಡುತ್ತಾ ಖಾದ್ಯದ ಸ್ವಾದ ಹೀರುವುದು..

ಅಲ್ಲಿಂದ ಇಟಲಿಯ ರಾಜಧಾನಿಯಾದ ರೋಮ್‌ಗೆ ಮುಂದಿನ ಪಯಣ. ಅದು ಪರ್ಯಾಯ ದ್ವೀಪದ ಟೈಬರ್ ಕಣಿವೆಯ ಪಶ್ಚಿಮ ಭಾಗದಲ್ಲಿದೆ. ವೆಟಿಕನ್ ಸಿಟಿ ಜಗತ್ತಿನಲ್ಲೇ ಅತ್ಯಂತ ಚಿಕ್ಕದಾದ ದೇಶ. ಅದನ್ನು ರೋಮ್ ಸುತ್ತುವರೆದಿದೆ. ಭೌಗೋಳಿಕವಾಗಿ ಅದನ್ನು 7 ಬೆಟ್ಟಗಳ ನಗರವೆಂದೂ



ಕರೆಯುತ್ತಾರೆ. ಆದರೆ ಪ್ರಪಂಚದ ಎಲ್ಲ ಕ್ಯಾಥೊಲಿಕ್ ಚರ್ಚ್‌ಗಳ ಪವಿತ್ರ ಪ್ರಧಾನ ಕಛೇರಿ ಅಲ್ಲಿರುವುದರಿಂದ ಅದು eternal city ಎಂದೂ ಪ್ರಸಿದ್ಧವಾಗಿದೆ. ಅದು ಪಾಶ್ಚಿಮಾತ್ಯ ರಾಷ್ಟ್ರಗಳ ಸಾಂಸ್ಕೃತಿಕ ನಾಗರಿಕತೆಗೂ ಹೆಸರಾಗಿದೆ.

ಅಲ್ಲೋ ಹನುಮಂತನ ಬಾಲದಷ್ಟು ಉದ್ದದ q. ಸುಮಾರು ಎರಡು ಗಂಟೆ ಕಾಲ ಬಿಸಿಲಲ್ಲಿ ನಿಂತು ಚರ್ಚ್ ಒಳಗೆ ಹೋಗಬೇಕಾಯಿತು. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾದ ಊರು, ಪೋಪ್‌ನ ವಾಸಸ್ಥಳವೂ ಆಗಿದೆ. ಮೈಕೆಲ್ ಏಂಜೆಲೋನ ಪುರಾತನ ಶಿಲ್ಪಗಳು ಅಲ್ಲಿಯ museumನಲ್ಲಿ ರಾರಾಜಿಸುತ್ತಿವೆ. ಅದನ್ನು ನಿಧಾನವಾಗಿ ನೋಡಲು ಸುಮಾರು 8 ದಿನವಾದರೂ ಬೇಕು. ಅಲ್ಲಿಯ ಸೌಂದರ್ಯ ಸವಿದು ಪೀಸಾ ಟವರ್‌ಗೆ ಹೋದೆವು.

ದಾರಿಯುದ್ದಕ್ಕೂ ಬಹುಕೃತವೇಷ ಧರಿಸಿದ ಭಿಕ್ಷುಕರು ವಿವಿಧ ಪೈಂಟುಗಳನ್ನು ಮೈಮೇಲೆಲ್ಲಾ ಬಳಿದುಕೊಂಡು ಪ್ರತಿಮೆಗಳ ತರಹ ನಿಂತಿರುತ್ತಿದ್ದರು. ನಾವೇನಾದರೂ ಫೋಟೊ ತೆಗೆದುಕೊಳ್ಳಲು ಹೋದರೆ, ದುಡ್ಡು ಕೀಳುತ್ತಿದ್ದರು. ಕೆಲವರಂತೂ ಹೊಡೆಯಲಿಕ್ಕೇ ಬಂದರು. ಅವರಿಂದ ತಪ್ಪಿಸಿಕೊಂಡು ಟವರ್ ಹತ್ತಿರ ಹೋದರೆ ಅದರ ಮಹಡಿ ಮೆಟ್ಟಲುಗಳನ್ನು ಮುಚ್ಚಿದ್ದರು. 56 ಮೀಟರ್ (185 ಅಡಿ) ಎತ್ತರವಿರುವ ಪೀಸಾ ಟವರ್, ತಳಪಾಯದ ಮೃದು ಮಣ್ಣಿನಿಂದ 4 ಡಿಗ್ರಿ ವಾಲಿದೆ. ಈಗ ಸಧ್ಯಕ್ಕೆ ವಾಲಿದ ಗಂಟಾ ಗೋಪುರ, ಇಟಲಿಯ ವಾಸ್ತು ಶಿಲ್ಪದ ಸಂಕೇತವಾಗಿ ವಿಶ್ವದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ದೂರದಿಂದಲೇ ಎಲ್ಲರೂ ಅದರೆಡೆ ಕೈಯೊಡ್ಡಿ ತಾವೇ ವಾಲಿದ ಟವರ್ ಅನ್ನು ಹಿಡಿದು ನಿಲ್ಲಿಸಿರುವಂತೆ ಫೋಟೊ ತೆಗೆಸಿಕೊಂಡಾಯಿತು. ಇಡೀ ರೋಮ್ ನಲ್ಲಿ roadside market ಅಂದ್ರೆ ಮಲಯಾಳಿಗಳೇ ವ್ಯಾಪಾರಸ್ತರು. ತಮಿಳು, ಮಲೆಯಾಳ, ಕನ್ನಡ ಮಾತಾಡುತ್ತಾ shopping ಮಾಡಿದ್ದಾಯಿತು.

ಮಾರನೆಯ ಬೆಳಗ್ಗೆ colosseum ಅಂದರೆ ಮೂಲದಲ್ಲಿ ಫ್ಲೇವಿಯನ್ ಆಂಫಿ ಥಿಯೇಟರ್ ನೋಡಲು ಹೊರಟೆವು. ಅದು ರೋಮ್‌ನ ಪುರಾತನ ಬೃಹತ್ ಮನರಂಜನಾ ಬಯಲು ರಂಗಮಂದಿರ. ರೋಮ್ ಸಾರ್ವಜನಿಕ ನಾಗರಿಕರ ಸಲುವಾಗಿ ಒಬ್ಬ ವ್ಯಕ್ತಿಯು ಪ್ರಾಣಾಪಾಯದ ಸ್ಥಿತಿಯಲ್ಲಿ ಕಾಡು ಪ್ರಾಣಿಯೊಂದಿಗೆ ಹೋರಾಡುವುದು. (ಸಾಮಾನ್ಯವಾಗಿ ಗುಲಾಮ ಅಥವಾ ಸೆರೆಯಾಳು) ಇದು ಪ್ರಾಚೀನ ರೋಮ್‌ನಲ್ಲಿ ಒಂದು ಜನಪ್ರಿಯ ಕ್ರೀಡೆಯಾಗಿತ್ತು. ಸುಮಾರು 70,000ದಿಂದ 80,000 ಸಾವಿರ ಜನ ಒಟ್ಟಿಗೆ ಕೂತು ನೋಡಬಹುದಾದ ಜಾಗ.

ನಮ್ಮ ಜೊತೆಗೆ ಒಬ್ಬ ಹೆಂಗಸು guide ಆಗಿ ಬಂದಿದ್ದಳು. ಎಲ್ಲರ ಕಿವಿಗೂ ಒಂದೊಂದು earphone ಕೊಟ್ಟು ಅದನ್ನು ವಿವರಿಸುತ್ತಾ ಬಂದಳು. ರೋಮನ್ ಸಾಮ್ರಾಜ್ಯಶಾಹಿ ಕ್ರೌರ್ಯದ ಅತಿರೇಕವನ್ನು ಕೇಳಲು ಅಸಾಧ್ಯ. ಶ್ರೀಮಂತರ ಅಟ್ಟಹಾಸಕ್ಕೆ ಮಿತಿಯೇ ಇಲ್ಲದ gladiator. ಸಿಂಹ, ಗೂಳಿ ಮುಂತಾದ ಪ್ರಾಣಿಗಳಿಗೆ ಮತ್ತೇರಿಸಿ ಗುಲಾಮರನ್ನು ಎದುರಿಗಿಟ್ಟು ಅವರ ಪ್ರಾಣಕ್ಕೆ ಪಣವೊಡ್ಡಿ ಮನರಂಜಿಸುವುದು ಎಷ್ಟು ಮಟ್ಟಿನ ನಾಗರೀಕತೆ? ಅಲ್ಲಿಯ ಅಮಾನವೀಯತೆಗೆ ಧಿಕ್ಕಾರವೆಂದು ಬಂದೆವು.

ಇನ್ನೊಂದು ನಮ್ಮನ್ನು ಹೆದರಿಸಿದ್ದ ವಿಷಯವೆಂದರೆ ಅಲ್ಲಿಯ ನೀಗ್ರೋಗಳು, ಹಾವನ್ನು ಮೈಮೇಲೆ ಎಸೆದು, passport ಕದಿಯುತ್ತಾರೆಂದು ಸುದ್ದಿ. ಸರಿ ಎಲ್ರೂ ಹೆದರಿಕೊಂಡು passport ಬ್ಯಾಗ್ ಕತ್ತಿಗೆ ತಗಲಿಹಾಕಿಕೊಂಡು ನಮ್ಮ ಕಣ್ಣಮುಂದೆಯೇ ಇರುವ ಹಾಗೆ ಜೋಪಾನ ಮಾಡಬೇಕಾಯಿತು.

ಸೆಂಟ್ ಬೆಸಿಲಿಕಾ ಚರ್ಚ್, ಕಲೋಸಿಯಮ್, ಪಾರ್ಥೆನಾನ್, ನೋಡಿಕೊಂಡು ಟ್ರಿವಿ ಫೌಂಟೆನ್‌ಗೆ ಹೋದೆವು. ಅದನ್ನು ಫಾಂಟೇನಾ ರೋಮ್ ಎಂದೂ ಕರೆಯುತ್ತಾರೆ. ಇಲ್ಲಿ ನೆಪ್ಚೂನ್‌ನ ಪ್ರತಿಮೆ ಪಲಾಜಿಯೋ ಪೋಲಿ ಎನ್ನುವ ಕಟ್ಟಡದ ಮುಂದೆ ಎರಡು ಕುದುರೆಗಳ ರಥದ ಮೇಲಿದೆ. ಒಂದು ಕುದುರೆ ಪ್ರಶಾಂತ ಸಮುದ್ರದ ಸಂಕೇತವಾದರೆ, ಇನ್ನೊಂದು ಮತ್ತೇರಿದ ಸಮುದ್ರದ ವೈರುಧ್ಯದ ಸಂಕೇತವಾಗಿದೆ. ಅಲ್ಲಿಯ ರೂಢಿಯಂತೆ ಫೌಂಟೆನ್‌ಗೆ ಬೆನ್ನು ಮಾಡಿ Coin ನೀರೊಳಗೆ ಎಸೆದರೆ ನಾವು ಅಲ್ಲಿಗೆ ಮತ್ತೆ ಭೇಟಿ ಕೊಡುವ ಅವಕಾಶವಿರುವುದಂತೆ ನಾವೆಲ್ಲರೂ ನಮ್ಮ ಭಾರತೀಯ ನಾಣ್ಯಗಳನ್ನೇ ಹಾಕಿ ದುಡ್ಡು ಉಳಿಸಿದೆವು ಎಂದುಕೊಂಡೆವು. ಎದುರಿಗೇ ಪ್ರಸಿದ್ಧವಾದ ಇಟಲಿಯ ಜಿಲಾಟೋ ಐಸ್ ಕ್ರೀಮ್ ಅಂಗಡಿ ಇತ್ತು. ಅದರ ವಿಶೇಷತೆಯೆಂದರೆ ಬೇರೆ ಎಲ್ಲಾ frozen desert ಗಳಿಗಿಂತ 6–9% butterfat ಕಡಿಮೆ ಇರುತ್ತದಂತೆ. ಇಲ್ಲಿಂದಲೇ ಮಕ್ಕಳೆಲ್ಲಾ ಅದನ್ನು ಮಾತ್ರ ಮಿಸ್ ಮಾಡ್ಬೇಡಿ ಎಂದು ಸಾವಿರ ಸಲ ಹೇಳಿಕಳಿಸಿದ್ದರು. ನನ್ನ diabitic doctor ಸಹ ಜಬರದಸ್ತ್ ಔಷಧಿ ಕೊಡ್ತೀನಿ, ಐಸ್ ಕ್ರೀಮ್ ತಿಂದು ಬನ್ನಿ ಎಂದು ತಮಾಷೆ ಮಾಡಿದ್ರು. ಹಾಗಾಗಿ ಅದರ ರುಚಿಯನ್ನೂ ಸವಿದಿದ್ದಾಯ್ತು. ಹೆಸರಾಂತ ಸಿನಿಮಾಗಳಾದ 'ಬೆನ್ ಹರ್', 'ಕೊವಾಡಿಸ್' 'ರೋಮನ್ ಹಾಲಿಡೆ' ಚಿತ್ರೀಕರಣ ನಡೆದ ಸ್ಥಳವನ್ನೂ ಸಂದರ್ಶಿಸಿದೆವು.

ಉಳಿದಿದ್ದು ಮಾಯಾನಗರಿ ಸ್ವರಾಸ್ಕಿ. ಅದರ ಬಗ್ಗೆ ತುಂಬಾ ಕೇಳಿದ್ದೆ. ಯೂರೋಪಿನ ಅತ್ಯಂತ ಪ್ರಸಿದ್ಧ ಆಭರಣದ ಮಳಿಗೆ. ಹಸಿರು ಗಿಡಮರಗಳಿಂದಾವೃತವಾದ ಪ್ರವೇಶ ದ್ವಾರ. ಒಳಗೆ ಹೋದರೆ ವಿವಿಧ ಹರಳಿನ ಆಕೃತಿಗಳು. ಭಾರತದ ನವಿಲೂ ಹರಳಿನಿಂದ ಅಲಂಕೃತಗೊಂಡು ಸಿಂಗಾರಮಯವಾಗಿ ನಿಂತಿತ್ತು. ಒಳಗೇ ಸುತ್ತುತ್ತಾ ಪ್ರದರ್ಶನವನ್ನು ನೋಡಿದ ಮೇಲೆ, ಹಿಂದೆ ದೊಡ್ಡ ಶೋರೂಮ್ ಬೇರೆ ಇತ್ತು. ಆಸ್ಟ್ರಿಯಾದಲ್ಲೇ ತಯಾರಾಗುವ ವೈವಿಧ್ಯಮಯವಾದ ಗಡಿಯಾರಗಳು, ಕಣ್ಣುಕೋರೈಸುವ ಆಭರಣಗಳನ್ನು ಖರೀದಿ ಮಾಡಬಹುದಿತ್ತು. ಎಲ್ರೂ ಸಾಕಷ್ಟು ಖರೀದಿ ಮಾಡಿದರು. ಅಲ್ಲಿಯ washroom ಸಹಿತ ಎಷ್ಟು ವೈಭವೋಪೇತವಾಗಿತ್ತು ಎಂದರೆ ನಮ್ಮಲ್ಲಿ ಕೆಲವರು ಅದರ ಫೋಟೊವನ್ನೂ ಕ್ಲಿಕ್ಕಿಸಿಕೊಂಡರು.

ಇಲ್ಲಿಗೆ ನಮ್ಮ ಪ್ಯಾಕೇಜ್ tour ಮುಗಿಯಿತು. ಹೋಟೆಲ್ ಗೆ ಹೋಗಿ luggage ಪ್ಯಾಕ್ ಮಾಡಿ ಏರ್ಪೋರ್ಟ್ ಗೆ ಹೊರಟೆವು. ಸಂಜೆ ಸೂರ್ಯ ಮುಳುಗುತ್ತಿದ್ದ. ನಮ್ಮ formalitie ಮುಗಿದು, ಅಲ್ಲಿಯ ಟ್ರೈನ್‌ನಲ್ಲಿ ಹತ್ತಿ ಒಂದೆರಡು ಪ್ಲಾಟ್ ಫಾರ್ಮ್ ಮುಂದೆ ಹೋಗಿ ಪ್ಲೇನ್ ಹಿಡಿಯಬೇಕಾಗಿತ್ತು. ಅದೂ ಒಂದು tension ಆಗಿತ್ತು ನಮಗೆ. ನಮ್ಮ ಗುಂಪೂ ಚದುರಿತ್ತು. ಯಾರು ಎಲ್ಲಿ ಇಳಿಯುತ್ತಾರೋ, ಎಲ್ಲಿ ಹತ್ತಬೇಕೋ ತಿಳಿಯದಾಗಿತ್ತು. ಅಂತೂ ಎಲ್ರನ್ನೂ ಒಟ್ಟಿಗೆ ನೋಡಿದ್ಮೇಲೇ ಸಮಾಧಾನ. ಹೀಗೆ ಯೂರೋಪು ಪ್ರವಾಸ ಮುಗಿಸಿ ಸುಖವಾಗಿ ಭಾರತಕ್ಕೆ ವಾಪಸ್ಸು ಬಂದೆವು.

# ಜೋಧಪುರದ ಉಮೇಧ ಭವನ



ಸಂಗ್ರಹ : **ಶಶಿಕಾಂತ್ ಜೋಶಿ**

ರಾಜಸ್ಥಾನ ಅಂದರೆ ಥಟ್ಟನೆ ನೆನಪಾಗುವುದು ಅಲ್ಲಿಯ ವಿಶಾಲವಾದ ಮರುಭೂಮಿ, ಅದರ ಜೊತೆಗೆ ಅಲ್ಲಿಯ ವಿಶಾಲವಾದ ಮರುಭೂಮಿ, ಅದರ ಸಂಗಡ ಅಲ್ಲಿಯ ಮುಖ್ಯ ಊರುಗಳಲ್ಲಿರುವ ಸುಂದರ ಅರಮನೆಗಳು. ರಾಜಸ್ಥಾನದ ಪ್ರಮುಖ ಪಟ್ಟಣಗಳಾದ ಜೈಪುರ, ಜೋಧಪುರ, ಜೈಸೆಲಮೇರ, ಬಿಕಾನೇರ, ಚಿತ್ತೋಡಗಢ, ಉದಯಪುರ, ಡುಂಗರಪುರ ಇತ್ಯಾದಿ ಪ್ರಾಂತಗಳಲ್ಲಿ ಅಲ್ಲಿನ ಬೇರೆ ಬೇರೆ ವಂಶಜರ ರಾಜರುಗಳು ಶತಮಾನಗಳಿಂದ ಆಳಿ ಸುಂದರ ಅರಮನೆಗಳನ್ನು ಕಟ್ಟಿದ್ದಾರೆ. ಒಮ್ಮೆಯಾದರೂ ಈ ಅರಮನೆಯನ್ನು ನೋಡಬೇಕು. ಒಂದೇ ಊರಿನಲ್ಲಿ ಹಲವಾರು ಅರಮನೆಗಳು ಸಹ ಇವೆ. ನಾನು ಈ ಹೇಳ ಹೊರಟಿಹುದು ಜೋಧಪುರ ಉಮೇಧ ಭವನ ಅರಮನೆ ಬಗ್ಗೆ. ಇದಲ್ಲದೆ ಜೋಧಪುರದಲ್ಲಿ ಹಲವಾರು ನೋಡಲು ಸುಂದರ ಸ್ಥಳಗಳಿವೆ. ಮೆಹರ್ ಗಢ ಕೋಟೆ, ಶೀಶ್ ಮಹಲ್, ಫೂಲ್ ಮಲ್ ಗಂಟಾಘರ, ಜಸವಂತ ಥಡ್, ಬಾಳಸಮಂದ ಸರೋವರ ಇತ್ಯಾದಿ.

ಜೋಧಪುರದ ಉಮೇಧ ಭವನದಂಥ ಭವ್ಯ ಅರಮನೆಯನ್ನೂ ಅಲ್ಲಿನ ಮಹಾರಾಜರಾದ ಶ್ರೀ ಉಮೇಧ ಸಿಂಗ್ (1903–1947) ಅವರು ಕಟ್ಟಿಸಿದ್ದಾರೆ. 1929 ಅ ಸುಮಾರಿನಲ್ಲಿ ಜೋಧಪುರ ಪ್ರಾಂತ ತೀವ್ರ ಬರಗಾಲ ಎದುರಿಸಬೇಕಾಯಿತು. ಆಗ ಮಹಾರಾಜರು ಅಲ್ಲಿನ ರೈತಾಪಿ ಹಾಗೂ ಉಳಿದ ಜನ ಸಾಮಾನ್ಯರಿಗೆ ಸಹಾಯ ಧನ ಕೊಡಲು ಮುಂದಾದಾಗ ಅಲ್ಲಿನ ಪ್ರಜೆಗಳು ಅದನ್ನು ನಯವಾಗಿ ತಿರಸ್ಕರಿಸಿದರು. ಕೊಡುವುದಾದರೆ ಕೆಲಸ ಕೊಡಿ ಎಂದು ಕೇಳಿಕೊಂಡರು. ಜೋಧಪುರದ ಪ್ರಜೆಗಳು ಸ್ವಾಭಿಮಾನಿಗಳು ಬೇರೆ ಹೇಳಬೇಕಾಗಿಲ್ಲ. ಪ್ರಜೆಗಳ ಕೋರಿಕೆಗೆ ಸ್ಪಂದಿಸಿದ ಮಹಾರಾಜರು ಊರ ಹೊರಗಿನ ಚಿತ್ತರ ಟೇಕಡಿ ಎಂಬ ಸ್ಥಳವನ್ನು ಆರಿಸಿಕೊಂಡರು. ಮತ್ತು ಅಲ್ಲಿ ಸುಂದರ ಭವ್ಯ ಅರಮನೆಯನ್ನೂ ಕಟ್ಟಿಸುವ ವಿಚಾರ ಮಾಡಿದರು. ಅದು ಬರೆ ಗಿಡಕಂಟಿಗಳಿಂದ ಕೂಡಿದ ವಿಶಾಲವಾದ ಸಣ್ಣ ಗುಡ್ಡ. ಕಟ್ಟಡದ ರೂವಾರಿಯನ್ನು Shri. Henry Vaughan landester ಮತ್ತು Sir Samuel Swinton Jacob ಅವರಿಬ್ಬರಿಗೆ ವಹಿಸಿಕೊಡಲಾಯಿತು. ಇವರು ಇದಕ್ಕೂ ಮೊದಲು ದಿಲ್ಲಿಯ ವೈಸರಾಯ ಕಟ್ಟಡವನ್ನು ಕಟ್ಟಿ ಪ್ರಸಿದ್ಧಿಯನ್ನೂ ಪಡೆದಿದ್ದರು. ನವೆಂಬರ್ 18, 1929ರಲ್ಲಿ ಶಂಕುಸ್ಥಾಪನೆ ನೆರವೇರಿಸಿ, ಕಟ್ಟಡ ಕಟ್ಟಲು ಪ್ರಾರಂಭಿಸಿದರು. ಹಾಗೂ ಅದಕ್ಕೆ ಹೆಸರು ಇಟ್ಟರು. ಚಿತ್ತರ ಅರಮನೆ ಎಂದು. ಸಮೀಪದಲ್ಲಿರುವ ಹಳದಿ ಬಂಗಾರ ಬಣ್ಣದ ಕಲ್ಲುಗಳನ್ನು ಆರಿಸಲಾಯಿತು. ಆ ಭಾರವಾದ ಕಲ್ಲುಗಳನ್ನು ತರಲು ರೇಲ್ವೆ ಲೈನ್ ಸಹ ಹಾಕಲಾಯಿತು. ಅರಮನೆಯನ್ನೂ ಇಂಟರ್ ಲಾಕ್ ಪದ್ಧತಿಯಿಂದ ಕಟ್ಟಲಾಗಿದ್ದು ಗಾರೆ ಆಗಲಿ, ಸಿಮೆಂಟ್ ಆಗಲಿ ಉಪಯೋಗಿಸಲಿಲ್ಲ. ಯಾಕೆಂದರೆ ನೀರಿನ ಅಭಾವ. ಆವಾಗ ಈಗಿನ ಕಾಲದ ಹಾಗೆ ಭಾರವಾದ ಕಲ್ಲುಗಳನ್ನು ಇಟ್ಟು ಜೋಡಿಸಲಿಕ್ಕೆ ಆಧುನಿಕ ಯಂತ್ರಗಳು ಇರಲಿಲ್ಲ. ಅದಕ್ಕೆ ಅವರು ದೊಡ್ಡ ದೊಡ್ಡ ಭಾರವಾದ ಕಲ್ಲುಗಳನ್ನು ಐಸ್ ಕ್ಯೂಬ್‌ಗಳ ಮೇಲೆ ಇಟ್ಟು ಜೋಡಿಸಿದರು. ಈ ಅರಮನೆಯನ್ನು Indo-sarasemic ರೀತಿಯಲ್ಲಿ ಕಟ್ಟಲಾಗಿದೆ. ಕೆಲಸ ಮೊದಲ ಮೂರು ನಾಲ್ಕು ವರುಷ ಅತಿ ಮಂದಗತಿಯಲ್ಲಿ ನಡೆಯಿತು. ಏಕೆಂದರೆ ಎಲ್ಲರಿಗೂ ಕೆಲಸ ಸಿಗಲಿ ಎಂಬ ಉದ್ದೇಶದಿಂದ. ಅಂದಾಜು ವೆಚ್ಚ ಒಂದು ಕೋಟಿ ಹತ್ತು ಲಕ್ಷ ರೂಪಾಯಿಗಳು. ಬರ್ಮಾದಿಂದ ಒಳ್ಳೆಯ ಗುಣಮಟ್ಟದ ಸಾಗವಾನಿ ಕಟ್ಟಿಗೆಯನ್ನು ತರಿಸಲಾಯಿತು. ಮರಕಾನದಿಂದ ಉತ್ತಮವಾದ ಮಾರ್ಬಲ್ ಅನ್ನೂ ತರಿಸಲಾಯಿತು. ಅರಮನೆಗೆ ಬೇಕಾದ ಕಲಾವಸ್ತುಗಳನ್ನೂ ಇಂಗ್ಲೆಂಡಿನಲ್ಲೂ ಖರೀದಿಸಿ ಹಡಗಿನಲ್ಲಿ ತರುವಾಗ, ಅದು ವೈರಿಗಳ ದಾಳಿಯಲ್ಲಿ (ಎರಡನೆಯ ಮಹಾಯುದ್ಧ ಕಾಲ) ಮುಳುಗಿಸಲಾಯಿತು. ಆದರೆ ಧೃತಿಗೆಡದ ಮಹಾರಾಜರು ಇಲ್ಲಿಯ ಕೆಲಸಗಾರರಿಂದ ಅವೆಲ್ಲವನ್ನೂ ಮರುಸೃಷ್ಟಿಸಿ ಅವುಗಳಿಗೆಲ್ಲ ಭಾರತೀಯ ಮೆರಗನ್ನು ಕೊಟ್ಟಿದ್ದಾರೆ. ಇದನ್ನೂ ನಾವು ಈಗಲೂ ನೋಡಬಹುದು. ಸುಮಾರು 3000ಕ್ಕಿಂತಲೂ ಹೆಚ್ಚಿನ ಜನರು ಇದರಲ್ಲಿ ಸಹಭಾಗಿಯಾಗಿದ್ದರು. ಇದರಲ್ಲಿ 347 ಸುಸಜ್ಜಿತ ಸುಂದರ ಕೋಣೆಗಳಿವೆ, ಅಲ್ಲದೆ 300ಕ್ಕಿಂತಲೂ ಹೆಚ್ಚಿನ ಜನರು ಕೊಡುವಂಥ ಬ್ಯಾಂಕೆಟ್ ಹಾಲ್ ಇದೆ. ಕೆಳಗೆ ನೆಲಮಹಡಿಯಲ್ಲಿ ಅತಿ ಸುಂದರವಾದ ಈಜು ಕೊಳವನ್ನೂ ನಿರ್ಮಿಸಿದ್ದಾರೆ. ಕಟ್ಟಡದ ಒಳಗೆ ಅಲ್ಲಲ್ಲಿ ಸುಂದರ ಅಂಗಗಳು ಇವೆ. ಅವೆಲ್ಲವನ್ನೂ ಅಮೂಲ್ಯ ಕಲಾಕೃತಿಗಳಿಂದ ಅಲಂಕರಿಸಿದ್ದಾರೆ.





ಹೊರಗಡೆ ಸುಮಾರು 26 ಎಕರೆ ಪ್ರದೇಶದಲ್ಲಿ ಸುಂದರ ಹೂತೋಟವನ್ನು ಕಟ್ಟಿದ್ದಾರೆ. ಹಾಗೆಯೇ ಕಾರು ನೋಡುವ ಪ್ರಿಯರಿಗೆ ಒಂದು ಒಳ್ಳೆಯ ಅವಕಾಶ.. 1920–40ರಲ್ಲಿ ತಯಾರಾದ ಜಗತ್ತಿನ ಬಹುತೇಕ ಕಂಪನಿಗಳ ಅತಿ ಅತ್ಯುತ್ತಮ ಕಾರುಗಳನ್ನು ನೋಡಲು ಇಟ್ಟಿದ್ದಾರೆ. (Vintage Cars). ಅವೆಲ್ಲವು ಸುಸ್ಥಿತಿಯಲ್ಲಿದ್ದು ರಾಜವಂಶದ ಕಾರ್ಯಕ್ರಮದ್ದಲ್ಲಿ ಅದನ್ನೂ ಓಡಿಸುತ್ತಾರೆ. (ಉಪಯೋಗಿಸುತ್ತಾರೆ). ಈ ಕಟ್ಟಡದ ಕೆಲಸ 1943ರಲ್ಲಿ ಮುಗಿಯಿತು. ನಂತರ ಇದರಲ್ಲಿ ಶ್ರೀ ಉಮೇಧ ಸಿಂಗ್ ಮಹಾರಾಜರು ವಾಸಿಸುತ್ತಿದ್ದರು. ಇವರ ನಿಧನದ ನಂತರ ಇವರ ಮಗ ಶ್ರೀ ಹನುಮಂತ ಸಿಂಗ ಕೆಲವು ವರ್ಷ ಆಳಿದರು. 1952 ರ ಮೊದಲ ವರ್ಷದ ಚುನಾವಣೆ ಸಮಯದಲ್ಲಿ ಅವರು ಒಂದು ವಿಮಾನ ಅಪಘಾತದಲ್ಲಿ ತೀರಿಕೊಂಡರು. (Zubeidaa Film ನೆನಪಿಸಿಕೊಳ್ಳಿ) ನಂತರ ಈ ಚಿತ್ತರ ಟೆಕಡಿಅರಮನೆಅನ್ನು ಉಮೇಧ ಭವನ ಎಂದು ಹೆಸರಿಡಲಾಯಿತು. ಪ್ರಜೆಗಳ ಒಳಿತಿಗಾಗಿ ತಮ್ಮ ರಾಜ್ಯದ ಹಣವನ್ನು ಪ್ರಜೆಗಳಿಗಾಗಿ ಮುಡುಪಿಟ್ಟು ಬರಗಾಲದಂಥ ಕಠಿಣ ಪರಿಸ್ಥಿತಿಯನ್ನು ಅವರ ಒಳಿತಿಗಾಗಿ ಉಪಯೋಗಿಸಿದ ಉದಾಹರಣೆ ಬಹುಶಃ ವಿರಳ. ಕಾಲಕ್ರಮೇಣ ಈ ಉಮೇಧ ಭವನ ಅರಮನೆಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಯಿತು.

ಮೊದಲನೆಯ ಭಾಗ ಪಂಚತಾರಾ ಹೊಟೇಲ್ ಆಗಿ ಪರಿವರ್ತನೆಗೊಂಡಿದೆ. ಎರಡನೆಯ ಭಾಗ ಈಗಿನ ಮಹಾರಾಜರ ವಾಸಸ್ಥಳ. ಮೂರನೆಯ ಭಾಗ ಮ್ಯೂಸಿಯಮ್ ಆಗಿದೆ. ಮ್ಯೂಸಿಯಮ್ ನಲ್ಲಿ



ಮಹಾರಾಜರು ಉಪಯೋಗಿಸಲ್ಪಡುತ್ತಿರುವ ಎಲ್ಲ ತರಹದ ಆಯುಧಗಳ ಕಲಾಕೃತಿಗಳು, ವಸ್ತ್ರ ವಿನ್ಯಾಸಗಳು ಇತ್ಯಾದಿಗಳನ್ನು ಇಡಲಾಗಿದೆ. ರಾಜಸ್ಥಾನದ ಜನರು ಆಹಾರ ಪ್ರಿಯರು. ಜೋಧಪುರದಲ್ಲಿ ತರತರಹದ ಸಿಹಿತಿಂಡಿಗಳು ಹಾಗೂ ಇತರ ತಿಂಡಿಗಳು ಅತಿ ಪ್ರಸಿದ್ಧ. ಒಟ್ಟಾರೆ ಜೋಧಪುರ ಜೀವಮಾನದಲ್ಲಿ ಒಮ್ಮೆಯಾದರೂ ನೋಡಲೇಬೇಕಾದ ಸ್ಥಳ. ಒಂದು ವೇಳೆ ನೋಡಿದ್ದರೆ ಅದನ್ನು ಮೆಲುಕು ಹಾಕಿಕೊಳ್ಳುವುದು ಒಳ್ಳೆಯದು. ●

## 'ಸಸಿಗೊಂದು ಸಿಹಿ ಮುತ್ತು' ತಿಮ್ಮಕ್ಕ ಅಂದ್ರು

"ಹಣದ ಮರವೋ, ಹಸಿರು ಮರದ "ಹಸಿರುಸಿರ..." ಹಣವೋ..
ಸಾಲುಮರದ ತಿಮ್ಮಕ್ಕ...
ಕೇಳಿ ನೋಡಿದಾಗ ಅಕ್ಕ, ಪಕ್ಕ..
ಮರ, ಗಿಡಗಳು ನಕ್ಕವು ಕಿಸಕ್ಕನೆ,
ಮನುಜನ ಆಸೆ... ತೀರದು ಸುಮ್ಮನೆ,
ಹಣದ ಮರದಾಸೆ... ಝಣ, ಝಣ,
ಕಾಂಚಾಣ... ಎಣಿಸೆ... ಹಗರಣ,
ನನ್ನನುಳಿಸಿ... ಕಾಪಾಡಿ ಎಂದಿತು ಪರ್ಯಾವರಣ,
ಹಸಿರು ಬೆಳೆಸಿ, ನಿಮ್ಮುಸಿರ ಉಳಿಸಿ,
ಆರೋಗ್ಯ ಸಿರಿದೇವಿ ನೆಲೆಸುವಳು... ಕಂಗೊಳಿಸುವಳು,
ಹಾಲು, ತುಪ್ಪದಲಿ ಕೈ ತೊಳೆಯಿರಿ..
"ಸಸಿಗೊಂದು ಸಿಹಿಮುತ್ತು"... ಅದುವೇ ಘನ... ಸಂಪತ್ತು,
ಹಸಿರುಸಿರ...ಉಸಿರಾಡಿ...
ದೀರ್ಘಾಯುರಾರೋಗ್ಯ ಭಾಗ್ಯದ ಎಲೆ, ಎಲೆಗಳು
ನಗುವುದ ನೀವೇ ನೋಡಿ... ಅಂದ್ರು ಸಾಲು ಮರದ ತಿಮ್ಮಕ್ಕ.

✍ ಸುಮನಾ

# ಸಿಲೋನ್ ಸುಶೀಲಾ ಮೀಸೆ ಹೆಂಗಸು ಮತ್ತು ಇತರರು

(ಉಮಾ ರಾವ್ ಕಥೆಗಳು)



✍ ಉಮಾ ರಾವ್

## ಹಾತೂನಿಕಾ ಎಂಬ ಕನಸು

ಅವನ ಹೆಸರು ಮೂರ್ತಿ. ಕೇಶವ ಮೂರ್ತಿ. ನಿವೃತ್ತ ಕೃಷಿ ಬೆಳೆಗಾರ ಮನೆ. ಉಚ್ಚ ಹುದ್ದೆಯಲ್ಲಿದ್ದ ಮಕ್ಕಳು. ಮುದ್ದು ಮುದ್ದಾದ ಮೊಮ್ಮಕ್ಕಳು. ಬ್ಯಾಂಕಿನ ತುಂಬಾ ಹಣ. ಹೆಂಡತಿ ಹೋಗಿ ವರ್ಷಗಳಾಗಿವೆ. ಅದನ್ನೂ ಒಪ್ಪಿಕೊಂಡಿದ್ದಾನೆ. ಅವನು ಆಗಾಗ ನೋಡುವ "ಆಸ್ಥಾ" ಚ್ಯಾನೆಲ್ಲಿನಲ್ಲಿ ಹೇಳುವಂತೆ ಹೋಗಲೇ ಬೇಕಲ್ಲಾ ಒಬ್ಬರು ಮೊದಲು. ದಿನ ಹೇಗೋ ಸಾಗುತ್ತಿತ್ತು. ಒಂದು ವರ್ಗೀಯ ಮನಸ್ಸಿನಲ್ಲಿ ಪರಿಪೂರ್ಣವಾದ ಜೀವನವನ್ನು ವ್ಯಾಕರಣಕ್ಕೆ ತಕ್ಕಂತಿದ್ದ ತನ್ನ ಬದುಕಿನ ಬಗ್ಗೆ ಅವನಿಗೆ ಸಂತೃಪ್ತಿಯಿತ್ತು. ಹಾಗಾಗಿ ಈ ಕ್ಷಣವೇ ತನಗೆ ಸಾವಿನ ಪಶ್ಚಾತ್ತಾಪವಿಲ್ಲ ಎಂದು ದಿನಾ ಒಮ್ಮೆ ಗಟ್ಟಿ ಮಾಡಿಕೊಳ್ಳುತ್ತಲೂ ಇದ್ದ.

ಆದರೂ ಸಂಜೆಗಳು ಮುಳುಗುತ್ತಿದ್ದಾಗ ಎಲ್ಲೋ ಆಳದಲ್ಲಿ ಮಿಡಿಯುವ ಒಂಟಿತನ. ಅರಿವಿಗೆ ಬರದ ನೋವು. ಅದನ್ನು ಹಿಮ್ಮೆಟ್ಟಿಸಲು ಒಂದೋ ಎರಡೋ ಪೆಗ್ಗು ಸ್ಕಾಚ್. ಜೊತೆಗೆ ಜಸ್ರಾಜ್ ಸಂಗೀತ.

ಕತ್ತಲ ಸೀಳಿಕೊಂಡು ಯಾತ್ರೆ ಸಾಗಿದಂತೆ ಬದುಕು ಹೆಚ್ಚು ಸಹ್ಯವೆನಿಸತೊಡಗಿ ನೆನಪಿನ ಮೈಲುಗಲ್ಲುಗಳು ಹಾದು ಹೋಗುತ್ತಿದ್ದವು. ಯಾವಾಗಲೂ ಒಂದೆಡೆ ನಿಲುಗಡೆ.

ರಾಶಿ ರಾಶಿ ಹಿಮದ ನಡುವಿಂದ. ಮಳೆ ಉದುರಿದ ಬೋಳು ಮರಗಳ ಆಚೆಯಿಂದ, ಇಳಿಜಾರು ಛಾವಣಿಯ ಮನೆಯ ತಿರುವಿನಿಂದ ಅವಳು ನಡೆದು ಬರುತ್ತಿದ್ದಳು. ಸ್ವಪ್ನಕನ್ನಿಕೆ. ಭುಜದವರೆಗೂ ಇಳಿಬಿದ್ದಿದ್ದ ನುಣುಪಾದ ಕಪ್ಪು ಕೂದಲು. ಉದ್ದ ಮುಖ. ತುಂಬಿದ ಕೆಂಪು ತುಟಿಗಳು. ಕಂದು ಕಣ್ಣುಗಳು. ಕಟ್ಟುಮಸ್ತಾದ ಮೈಮಾಟ. ನೀಲಿ ಡೆನಿಮ್ ಶಾರ್ಟ್ಸ್, ಬಿಳಿ ಶರಟು. ಮೇಲೆರಡು ಗುಂಡಿಗಳು ತೆರೆದೇ ಇರುತ್ತಿದ್ದವು.

"ನನ್ನ ಹೆಸರು ಜೆನ್ನಿ, ನಾನು ಗ್ರೀಕ್" ಎಂದಿದ್ದಳು ಮೊದಲ ಬಾರಿ ಭೇಟಿಯಾದಾಗ.

"ನೀವು ಮರ್ಟಿ?"

"ಅಲ್ಲ ಮೂರ್ತಿ," ಎಂದು ಅವನು ಎಷ್ಟು ಸಲ ಹೇಳಿದ್ದರೂ ಅವಳಿಗೆ ಅವನು ಮರ್ಟಿಯೇ.

ಅವಳ ನಿಜವಾದ ಹೆಸರು ಹಾತೂನಿಕಾ ಆಡ್ಜಿಮಿಯನ್. ಅರ್ಮೀನಿಯ ದೇಶದವಳು. ಆಗಿನ ಕಾಲದಲ್ಲಿ ರಶ್ಯಾ ತುಳಿದು ತುಳಿದು ಹಣ್ಣು ಮಾಡಿದ್ದ ಅರ್ಮೀನಿಯಾ ತುಂಬಾ ಅಶಕ್ತ ದೇಶವೆಂದು ಜನರು ತಿಳಿದ್ದರಿಂದ. ಅವಳು ತಾನು ಗ್ರೀಸಿನವಳು ಎಂದು ಹೇಳಿಕೊಳ್ಳುತ್ತಾಳೆ ಎಂದು ಎಲ್ಲರಿಗೂ ಗೊತ್ತಿತ್ತು. ಹಾತೂನಿಕಾ ಎನ್ನಲು ಅಮೆರಿಕನ್ನರಿಗೆ ನಾಲಿಗೆ ತಿರುಗೊಲ್ಲ. ಅದಕ್ಕೆ ನನ್ನ ಹೆಸರು ಜೆನ್ನಿ ಎಂದು ಹೇಳುತ್ತೇನೆ ಎಂದು ಅವಳು ಹೇಳಿದರೂ ಅದಕ್ಕೆ ಕಾರಣೂ ತನ್ನ ಮೂಲವನ್ನು ಮುಚ್ಚಿಡುವುದೇ ಆಗಿತ್ತೆಂದೂ ಗೊತ್ತಿತ್ತು. ಅದು ಹೇಗೋ ತನ್ನ ರೂಮ್ಮೇಟನ್ನು ಭೇಟಿಯಾಗಲು ಬರುತ್ತಿದ್ದ ಅವಳ ಕರಿ ಗಡ್ಡ ಕರಿ ಕೂದಲಿನ ಗಳೆಯನ ಮೂಲಕ ಮೂರ್ತಿಗೆ ಅವಳ ಪರಿಚಯವಾಯಿತು. ನಂತರ ಪರಿಚಯ ಸ್ನೇಹಕ್ಕೆ ತಿರುಗಿ ಅವಳು ಒಬ್ಬೊಬ್ಬಳೆಯೂ ಬರತೊಡಗಿದ್ದಳು.

"ಮರ್ಟಿ. ನಿನ್ನ ಫ್ರಿಜ್ಜ್‌ನಲ್ಲಿ ಬಿಯರ್ ಇದೆಯಾ?"

"ಮರ್ಟಿ, ನನ್ನ ಇಸ್ತ್ರಿ ಪೆಟ್ಟಿಗೆ ಕೆಟ್ಟು ಹೋಗಿದೆ. ಇಲ್ಲಿ ಮಾಡಿಕೊಳ್ಳಲಾ?"

"ಮರ್ಟಿ, ಇವತ್ತು ಸಾರು ಮಾಡಿದೀಯಾ? ನಿನ್ನ ಸಾರು, ಅನ್ನ ತಿಂದು ತುಂಬಾ ದಿನವಾಯಿತು."

ಒಂದು ದಿನ ಇದ್ದಕ್ಕಿದ್ದಂತೆ "ನನ್ನ ಗಳೆಯ ನನಗೆ ಕೈ ಕೊಟ್ಟ" ಎಂದು ಅವನನ್ನು ಬೇರೊಂದು ಹುಡುಗಿಯೊಡನೆ ಯೂನಿವರ್ಸಿಟಿ ಕ್ಯಾಂಪಸಿನ ಪಬ್‌ನಲ್ಲಿ ಕಂಡು ಕಂಗಾಲಾಗಿ ಓಡಿ ಬಂದು ಕಣ್ಣೀರು ಸುರಿಸಿದ್ದಳು. ಸ್ವಲ್ಪ ದಿನ ಒಂಟಿಯಾಗೇ ಓಡಾಡುತ್ತಿದ್ದಳು. ಪ್ರತಿ ಸಂಜೆ ರೂಮಿಗೆ ಬಂದು ಹರಟುತ್ತಿದ್ದಳು.

"ಮರ್ಟಿ, ನಿನಗೆ ಮಾತ್ರ ಅದ್ದೇಗೆ ಗರ್ಲ್ ಫ್ರೆಂಡ್ ಇಲ್ಲ"

"ನಾವು ಇಂಡಿಯನ್ಸ್ ಬೇರೆ ಥರಾ. ನನಗೆ ಮದುವೆಯಾಗಿದೆ. ವರ್ಷವೂ ಆಗಿಲ್ಲ. ನನ್ನ ಹೆಂಡತಿ ಊರಲ್ಲಿ ನನಗಾಗಿ ಕಾಯುತ್ತಿದ್ದಾಳೆ ಪಾಪ" ಎಂಬ ವಿವರಣೆಗೂ ಅವಳಲ್ಲಿ ಪ್ರಶ್ನೆಯಿತ್ತು.

"ಆದರೆ ಮರ್ಟಿ ನಿನ್ನ ರೂಮ್ಮೇಟ್ ಚೋಪ್ರಾಗೂ ಮದುವೆಯಾಗಿದೆ. ಅವನಿಗೆ ದಿನಕ್ಕೆ ಒಬ್ಬ ಗರ್ಲ್ ಫ್ರೆಂಡ್. ಹಾಗೇ ಅವಳ ದೃಷ್ಟಿ ಟೇಬಲ್ ಮೇಲಿದ್ದ ಅವನ ಹೆಂಡತಿಯ ಪುಟ್ಟ ಫೋಟೋದತ್ತ ಹರಿದು "ವಾವ್! ಎಷ್ಟು ಬ್ಯೂಟಿಫುಲ್ ಆಗಿದ್ದಾಳೆ. ಅವಳಿಗೆ ಬಾಯ್ ಫ್ರೆಂಡ್ ಇಲ್ಲಾಂತ ನಿನಗೆ ಹೇಗೆ ಗೊತ್ತು? ನೀನಿಲ್ಲಿ ತಪಸ್ಸು ಮಾಡ್ತಿರು. ಅವಳಲ್ಲಿ ಎಷ್ಟು ಹುಡುಗರೊಂದಿಗೆ ಓಡಾಡಿಕೊಂಡಿದ್ದಾಳೋ" ಎಂಬ ತುಂಟ ಪ್ರಶ್ನೆ.

"ಇಂಡಿಯಾದಲ್ಲಿ ಇಲ್ಲಿನ ಹಾಗಲ್ಲ, ಎಷ್ಟು ವರ್ಷವಾದರೂ ನನಗಾಗಿ ಅವಳು ಕಾಯ್ತಾಳೆ " ಎಂದು ತಾನಂದಿದ್ದು ಅವಳಿಗೆ ಅಷ್ಟೇನು ತೃಪ್ತಿ ತಂದಿರಲಿಲ್ಲ.

ಅವನು ಊರಿಗೆ ಹೊರಡುವ ಮೊದಲು ಏರ್‌ಪೋರ್ಟ್‌ಗೆ ಬಂದು ಬೀಳ್ಕೊಟ್ಟಿದ್ದಳು. ಜೊತೆಗೆ ಅವರೂರಿನ ಹಸ್ತಕಲೆಯೆಂದು *(ಪುಟ 15ಕ್ಕೆ...)*

# ಮೈಸೂರು ಅಸೋಸಿಯೇಷನ್, ಮುಂಬಯಿ
# THE MYSORE ASSOCIATION, BOMBAY
Centenary Year (1926 - 2026)

## ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ – 2025 ವಿಜೇತರು



ಪ್ರಥಮ ಬಹುಮಾನ

**“ನಾರಿ ಭಾರತ”**

ರಚನೆ : ವೆಂಕಟೇಶ ಪ್ರಸಾದ ರಾಮಕೃಷ್ಣ ಹೆಗಡೆ



ದ್ವಿತೀಯ ಬಹುಮಾನ

**“ಎಲ್ಲಿದೆ ನಮ್ಮ ಮನೆ”**

ರಚನೆ : ಪ್ರಹ್ಲಾದ ಜೋಶಿ



ತೃತೀಯ ಬಹುಮಾನ

**“ದಿ ಲಾಸ್ಟ್ ಅಟೋನ್ಮೆಂಟ್”**

ರಚನೆ : ಅಕ್ಷತಾ ರಾಜ್ ಪೆರ್ಲ

ತೀರ್ಪುಗಾರರು:

ಡಾ. ಭರತ್‌ಕುಮಾರ್ ಪೊಲಿಪು

ಪ್ರೊ. ಎಚ್. ಎಸ್. ಉಮೇಶ್



**ಅಭಿನಂದನೆಗಳು**



# ನೇಸರು ಜಾಗತಿಕ ಶಿಶುಕವನ ರಚನಾ ಸ್ಪರ್ಧೆ – 2025 ವಿಜೇತರು



ಪ್ರಥಮ ಬಹುಮಾನ

**"ನನಗೂ ಒಂದು ರೋಬೋ ಸಿಕ್ಕರೆ...."**

ರಚನೆ : ತಾ. ಶ್ರೀ. ಗುರುರಾಜ್

ದ್ವಿತೀಯ ಬಹುಮಾನ

**"ಅಮ್ಮನ ಡಬ್ಬಿ"**

ರಚನೆ : ಡಾ. ಟಿ. ಎಚ್. ಲವಕುಮಾರ





ತೃತೀಯ ಬಹುಮಾನ

**"ಪುಟ್ಟಿಯ ಮಳೆ ರಜೆ"**

ರಚನೆ : ರಮ್ಯ ಕೆ. ಜಿ.

ಮೆಚ್ಚುಗೆಯ ಬಹುಮಾನ

**"ಬಾರೋ ಭೂಮಿಯ ಕಂದ"**

ರಚನೆ : ಮೀನಾಕ್ಷಿ ಸುರೇಶ್ ಭಾಂಗಿ





ಮೆಚ್ಚುಗೆಯ ಬಹುಮಾನ

**"ಬಸವಣ್ಣ"**

ರಚನೆ : ಸತ್ಯವತಿ ಭಟ್, ಕೊಳಚಪ್ಪು

ತೀರ್ಪುಗಾರರು:



ಶ್ರೀಮತಿ ಕಲಾ ಭಾಗ್ವತ್ ಮತ್ತು ಶ್ರೀ ಎಚ್. ಡುಂಡಿರಾಜ್



ಅಭಿನಂದನೆಗಳು

# ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ – 2025 ವಿಜೇತರು



ಪ್ರಥಮ ಬಹುಮಾನ

**"ಹರಕೆ ಹುಂಜ"**

ರಚನೆ : ವಿವೇಕ ಬೆಟ್ಕುಳಿ



ದ್ವಿತೀಯ ಬಹುಮಾನ

**"ನೆಲದ ದಾಯ"**

ರಚನೆ : ಜಯರಾಮಚಾರಿ



ತೃತೀಯ ಬಹುಮಾನ

**"ಅರ್ಥದಾರಿ"**

ರಚನೆ : ಮುನವ್ವರ್ ಜೋಗಿಬೆಟ್ಟು



ಮೆಚ್ಚುಗೆಯ ಬಹುಮಾನ

**"ಕೊನೆಯುವಳು"**

ರಚನೆ : ಭವ್ಯಾ ಪಿ. ಆರ್. ನಿಡ್ಪಳ್ಳಿ



ಮೆಚ್ಚುಗೆಯ ಬಹುಮಾನ

**"ದರಗು ಉಲಿಯ ಹೊಂಬಣ್ಣದ ಆಶಯ"**

ರಚನೆ : ಅಶ್ವಿತಾ ಶೆಟ್ಟಿ ಇನೋಳಿ

ತೀರ್ಪುಗಾರರು:

ಶ್ರೀ. ಶರದ್ ಸೌಕೂರು ಮತ್ತು ಶ್ರೀಮತಿ ಮಿತ್ರಾ ವೆಂಕಟ್ರಾಜ್

ಅಭಿನಂದನೆಗಳು

# ಮಹಾಶಿವರಾತ್ರಿ : ಅಜ್ಞಾನದ ಕತ್ತಲೆಯಿಂದ ಸುಜ್ಞಾನದ ಬೆಳಕಿನೆಡೆಗೆ ಒಂದು ಪಯಣ



ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳೆಂದರೆ ಕೇವಲ ಸಂಭ್ರಮವಲ್ಲ, ಅವುಗಳ ಹಿಂದೆ ಅಧ್ಯಾತ್ಮಿಕ ಮತ್ತು ವೈಜ್ಞಾನಿಕ ಹಿನ್ನೆಲೆಗಳಿರುತ್ತವೆ. ಅಂತಹ ಪವಿತ್ರ ಹಬ್ಬಗಳಲ್ಲಿ ಅತ್ಯಂತ ಶ್ರೇಷ್ಠವಾದುದು 'ಮಹಾಶಿವರಾತ್ರಿ'. ಪ್ರತಿ ವರ್ಷ ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸಲಾಗುವ ಈ ಪರ್ವಕಾಲವು ಶಿವಭಕ್ತರ ಪಾಲಿಗೆ ಅತ್ಯಂತ ಮಂಗಳಕರವಾದ ದಿನವಾಗಿದೆ. ಶಿವ ಎಂದರೆ ಕೇವಲ ರೂಪವಲ್ಲ, ಅದು ಈ ಬ್ರಹ್ಮಾಂಡದ ಶಕ್ತಿ. ಆ ಶಕ್ತಿಯನ್ನು ಅಂತರಂಗದಲ್ಲಿ ಅನುಭವಿಸುವುದೇ ಈ ಹಬ್ಬದ ಮೂಲ ಉದ್ದೇಶ. ಪುರಾಣಗಳ ಪ್ರಕಾರ, ಮಹಾಶಿವರಾತ್ರಿಯ ಕುರಿತು ಅನೇಕ ಸ್ವಾರಸ್ಯಕರ ಕಥೆಗಳಿವೆ. ದೇವತೆಗಳು ಮತ್ತು ಅಸುರರು ಅಮೃತಕ್ಕಾಗಿ ಸಮುದ್ರ ಮಥನ ಮಾಡುವಾಗ ಹೊರಬಂದ ಹಾಲಾಹಲ ವಿಷವನ್ನು ಶಿವನು ಕುಡಿದು ಜಗತ್ತನ್ನು ವಿನಾಶದಿಂದ ಕಾಪಾಡಿದ ನೆನಪಿಗಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಹಾಗೆಯೇ, ಇದೇ ದಿನ ಶಿವನು ಪಾರ್ವತಿಯನ್ನು ವಿವಾಹವಾದನು ಮತ್ತು ಲಿಂಗರೂಪಿಯಾಗಿ ಭೂಮಿಯ ಮೇಲೆ ಕಾಣಿಸಿಕೊಂಡನು ಎಂಬ ನಂಬಿಕೆಯೂ ಇದೆ. ಈ ಎಲ್ಲಾ ಕಥೆಗಳು ಸತ್ಯವು ಅಸತ್ಯದ ಮೇಲೆ, ಬೆಳಕು ಕತ್ತಲೆಯ ಮೇಲೆ ಜಯ ಸಾಧಿಸುವುದನ್ನೇ ಸಾರುತ್ತವೆ. ಶಿವರಾತ್ರಿಯ ಆಚರಣೆಯಲಿ 'ಉಪವಾಸ' ಮತ್ತು 'ಜಾಗರಣೆ'ಗೆ ವಿಶೇಷ ಮಹತ್ವವಿದೆ. ಉಪವಾಸ ಎಂದರೆ ಕೇವಲ ಹಸಿವಿನಿಂದ ಇರುವುದಲ್ಲ, ಭಗವಂತನ ಹತ್ತಿರ (ಉಪ–ವಾಸ) ಇರುವುದು ಎಂದರ್ಥ. ಇಡೀ ದಿನ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಶಿವನ ಧ್ಯಾನದಲ್ಲಿ ತೊಡಗುವುದರಿಂದ ಮನಸ್ಸು ನಿರ್ಮಲವಾಗುತ್ತದೆ. ಇನ್ನು ಜಾಗರಣೆಯು ಅಧ್ಯಾತ್ಮಿಕ ಎಚ್ಚರದ ಸಂಕೇತವಾಗಿದೆ. ಅಜ್ಞಾನದ ನಿದ್ರೆಯಿಂದ ಎಚ್ಚೆತ್ತು ಜ್ಞಾನದ ಹಾದಿಯಲ್ಲಿ ನಡೆಯುವುದೇ ನಿಜವಾದ ಜಾಗರಣೆ. ಶಿವನಿಗೆ ಅಭಿಷೇಕ ಎಂದರೆ ಪರಮ ಪ್ರಿಯ. ಹಾಲು, ಮೊಸರು, ಜೇನುತುಪ್ಪ ಮತ್ತು ಪವಿತ್ರ ನೀರಿನಿಂದ ಶಿವಲಿಂಗಕ್ಕೆ ಅಭಿಷೇಕ ಮಾಡಿ, 'ತ್ರಿದಲಂ ತ್ರಿಗುಣಾಕಾರಂ' ಎನ್ನಲಾಗುವ ಬಿಲ್ವಪತ್ರೆಯಿಂದ ಅರ್ಚನೆ ಮಾಡುವುದು ಈ ದಿನದ ವಿಶೇಷ. 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರದ ಪಠಣವು ಪರಿಸರದಲ್ಲಿ ಸಕಾರಾತ್ಮಕ ಕಂಪನಗಳನ್ನು ಸೃಷ್ಟಿಸುತ್ತದೆ. ಹನ್ನೆರಡು ಜ್ಯೋತಿರ್ಲಿಂಗ ಕ್ಷೇತ್ರಗಳಿಂದ ಹಿಡಿದು ಹಳ್ಳಿಯ ಸಣ್ಣ ಗುಡಿಯವರೆಗೆ ಶಿವನಾಮ ಸ್ಮರಣೆ ಮೊಳಗುತ್ತದೆ.

ಒಟ್ಟಾರೆಯಾಗಿ, ಮಹಾಶಿವರಾತ್ರಿಯು ಕೇವಲ ಆಚರಣೆಯಲ್ಲ, ಅದು ನಮ್ಮ ಅಂತರಂಗವನ್ನು ಶುದ್ಧೀಕರಿಸಿಕೊಳ್ಳುವ ಒಂದು ದಿವ್ಯ ಅವಕಾಶ. ಲೌಕಿಕ ಜಗತ್ತಿನ ಜಂಜಾಟಗಳನ್ನು ಮರೆತು, ಅಂತರಾತ್ಮದ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ ಶಾಂತಿ ಮತ್ತು ನೆಮ್ಮದಿಯನ್ನು ಪಡೆಯುವುದೇ ಈ ಹಬ್ಬದ ಸಾರ್ಥಕತೆ. ನಾವೂ ಸಹ ಈ ಪವಿತ್ರ ದಿನದಂದು ಭಕ್ತಿಯಿಂದ ಪಾಲ್ಗೊಂಡು ಲೋಕದ ಕಲ್ಯಾಣಕ್ಕಾಗಿ ಪ್ರಾರ್ಥಿಸೋಣ.



ಕಲಾ ಭಾಗ್ವತ್ ಅವರ ಈ ಪ್ರಬಂಧ ಸಂಕಲನದಲ್ಲಿ ಇರುವ ಬರೆಹಗಳು ಹೆಗಲಿನ ಜೋಳಿಗೆಯಿಂದ ಹಿಡಿದು ಭೂಮಂಡಲದ ದಿಕ್ಸೂಚಿ ನಕಾಶೆಯವರೆಗೆ ಹಲವು ವಿಷಯ ವೈವಿಧ್ಯತೆಗಳಿಂದ ಚಾಚಿಕೊಂಡಿದೆ.ಹಳ್ಳಿಯ ಹಸಿರು ವಾತಾವರಣದಲ್ಲಿ ಬೆಳೆದ ಹುಡುಗಿಯೊಬ್ಬಳು ಮಹಾನಗರಿ ಮುಂಬೈಯ ಕಾಂಕ್ರೀಟ್ ಕಾಡಿನಲ್ಲಿ ಬದುಕು ಕಟ್ಟಿಕೊಂಡಿರುವ ಕಾರಣ ಇಲ್ಲಿಯ ಬರಹಗಳ ಮೂಲ ಅಂತಃಕರಣದ ಸೆರೆಯೊಳಗೆ ಮಣ್ಣಿನ ಪರಿಮಳ ಹೊಮ್ಮುತ್ತದೆ, ಬೇಸಿಗೆಕಾಲ, ಚಳಿಗಾಲ, ಮಾವಿನಹಣ್ಣು, ಸೈಕಲ್ ಸವಾರಿಯಂತಹ ಪ್ರಬಂಧಗಳಲ್ಲಿನ ಜೀವಸತ್ವ ತನ್ನ ಬೇರುಗಳನ್ನ ಕೂಡಿಕೊಳ್ಳುವುದೇ ಆಗಿದೆ.

ಹಾಗಾಗಿ ಊರಿನಿಂದ ತಾನು ಮುಂಬೈಗೆ ಹೊರಟಾಗ ಕಾರಿನಡಿಕ್ಕಿಯ ತುಂಬಾ ಸಂಬಂಧಿಕರು ಕೊಟ್ಟ ವಸ್ತುಗಳನ್ನು ತುಂಬಿಕೊಳ್ಳುವುದು. ದುಡ್ಡು ಕೊಟ್ಟರೆ ಎಲ್ಲಿಯೂ ಸಿಗಬಹುದಾದ ಆ ವಸ್ತುಗಳಿಗೆ ಕಲಾರ ಭಾವಪ್ರಪಂಚದೊಳಗೆ ಬೆಲೆಕಟ್ಟಲಾಗದ ಸ್ಥಾನವಿದೆ. ಅವು ಬರೀ ವಸ್ತುಗಳಲ್ಲ, ಅವು ಅವರ ಭಾವಕೋಶವನ್ನು ಸದಾ ಬೆಚ್ಚಗೆ ಕಾಯುವ ಭಾವತಂತುಗಳು, ಕಲಾ ಯಾವುದೇ ಪ್ರಬಂಧ ಬರೆಯಲಿ ಅಲ್ಲೊಂದು ಜೀವಕಾರುಣ್ಯ ಜಿನುಗುತ್ತದೆ. ಸಾಹಿತ್ಯ ಮತ್ತು ವೈಚಾರಿಕತೆ, ಜನ ಜೀವನದಲ್ಲಿ ಜಾನಪದದಂತಹ ಬರೆಹಗಳನ್ನು ಬರೆಯುವಾಗಲೂ ಅಲ್ಲಿ ಜೀವಪರ ಸಂವೇದನೆಯೊಂದು ಹಾದು ಹೋಗುತ್ತದೆ.

ಇಲ್ಲಿಯ ಜೋಳಿಗೆ ಮತ್ತು ನಕಾಶೆಯಂತ ಪ್ರಬಂಧಗಳು ಕಲಾ ಭಾಗ್ವತ್ ಅವರ ಬರಹದ ಗಟ್ಟಿತನವನ್ನು ತೋರಿಸುತ್ತವೆ. ಹೆಗಲ ಜೋಳಿಗೆಯಿಂದ ಶುರುವಾಗುವ 'ಜೋಳಿಗೆ' ಇಡೀ ಭೂಮಂಡಲವನ್ನು ತೂಗುವ ಜೋಳಿಗೆಯಾಗುತ್ತದೆ. ನಕಾಶೆಯೆಂಬ ದಿಕ್ಸೂಚಿಯ ಸಂಗತಿಯು ಗಡಿಗಳೇ ಇಲ್ಲದ ಮನುಷ್ಯರೆಲ್ಲರನ್ನೂ ಮಾನವತೆಯ ಚಪ್ಪರದಡಿ ತಂದು ನಿಲ್ಲಿಸುತ್ತದೆ. ಸಾಮಾನ್ಯ ಸಂಗತಿಯು ತೆರೆದುಕೊಳ್ಳುವ ವಿಷಯ ವಿಸ್ತರಣೆ ನಮ್ಮನ್ನು ಅಚ್ಚರಿಗೊಳಿಸುತ್ತದೆ. ಅದು ಒಂದು ಬಿಂದುವಿನಿಂದ ಹೊರಟು ಮುಂದೆ ಸಾಗುವ ಓಘಕ್ಕೆ ಇಲ್ಲಿ ವಿವಿಧ ಕವಲುಗಳನ್ನು ಪಡೆದುಕೊಳ್ಳುತ್ತದೆ. ಒಂದನ್ನು ತೋರಿಸುತ್ತಾ ಅನೇಕ ಸಂಗತಿಗಳನ್ನು ಲೇಖಕಿ ನಮಗೆ ಕಾಣಿಸುತ್ತಾರೆ. ಜೊತೆಗೆ ಅವು ನಮ್ಮ ಬದುಕಿನ ಕಡೆಗೂ ಬೆಳಕನ್ನು ಹಾಯಿಸುತ್ತವೆ. ಒಂದು ನಿರ್ದಿಷ್ಟವಾದ ವಿಷಯವನ್ನು ಸರಳವಾಗಿ ಹೇಳುತ್ತಾ ಜೀವನದ ಹಲವಾರು ಆಯಾಮಗಳತ್ತ ಹೊರಳಿಕೊಂಡ ಪ್ರಬಂಧಗಳು ಲವಲವಿಕೆಯ ನಡಿಗೆಯಲ್ಲಿ ಸಾಗುತ್ತದೆ.

ಕತೆಯ ಗತಿ, ಪ್ರಬಂಧದ ಲಾಸ್ಯ ಮತ್ತು ಕಾವ್ಯದ ಧ್ವನಿ ಶಕ್ತಿಯಿಂದಾಗಿ ಇಲ್ಲಿಯ ಪ್ರಬಂಧಗಳು ಹೆಚ್ಚು ಚೇತೋಹಾರಿಯಾಗಿದೆ. ವಸ್ತು, ವಿಷಯ ಯಾವುದೇ ಇರಲಿ, ಕಲಾರವರು ತನ್ನ ಭಾಷೆ, ಭಾವ, ಶೈಲಿ, ನಿರೂಪಣೆಯೊಂದಿಗೆ ಅದನ್ನು ಕಲಾತ್ಮಕಗೊಳಿಸುತ್ತಾರೆ. ಹಾಗೇ ವೈಯಕ್ತಿಕ ಸಂಗತಿಯನ್ನ ಸಾರ್ವತ್ರಿಕ ಗೊಳಿಸುತ್ತಾ ಒಂದು ಬಗೆಯ ರೋಮಾಂಚನವನ್ನು ಓದುಗರಿಗೆ ದಾಟಿಸಬಲ್ಲರು. ಮಾನವೀಯತೆ, ಸಮಾನತೆ, ಅರಿವಿನ ಸತ್ವದ ತತ್ವಗಳನ್ನು ಬರಹದ ಒಳದನಿಯಾಗಿಸುತ್ತಾ ಬರೆದ ಪ್ರಬಂಧಗಳು ಎಲ್ಲರಿಗೂ ಆಪ್ತವಾಗಬಲ್ಲದು. ಇಲ್ಲಿಯ ಭಾವಗಳು ನಮ್ಮವೂ ಅಂತ ಅನ್ನಿಸಬಲ್ಲವು.

ಒಳ್ಳೆಯ ಪ್ರಬಂಧಗಳಿಗಾಗಿ ಕಲಾರವರಿಗೆ ಶುಭ ಹಾರೈಸುವೆನು.

– ಸ್ಮಿತಾ ಅಮೃತರಾಜ್, ಸಂಪಾಜೆ



# ಒಂದು ಲಾಂಗ್ ಡ್ರೈವ್

*(ಕಳೆದ ಸಂಚಿಕೆಯಿಂದ...)*

✍ **ಜ್ಯೋತಿ ಆರ್.**

"ಸರಿ ಇನ್ನೊಂದು ದಿನ ಖಂಡಿತ ಹೋಗೋಣ, ಬೈ" ಎಂದು ಹೇಳಿ ಆಶ್ರಮದ ಬಳಿ ಅವಳನ್ನು ಇಳಿಸಿ ಮುಂದೆ ಹೋದ. ಅಂದು ಸಂಜೆಯೆಲ್ಲಾ ಸೌಮ್ಯಳಿಗೆ ಏನೋ ಹೊಸತನದ ಪುಳಕ. ಮೊದ ಮೊದಲ ಪ್ರೇಮದ ಪುಳಕವೆಂದರೆ ಹೀಗೇ ಇರಬೇಕು ಎಂದು ಮುದಗೊಳ್ಳುವಳು. ಆದರೆ ಅದನ್ನು ಹೇಳಿಕೊಳ್ಳಲು ಚೌಚಿತ್ಯವೆನಿಸುವ ಸಮಾನ ಮನಸ್ಕ ಗೆಳತಿಯರೇ ಅವಳಿಗಿರಲಿಲ್ಲ. ಒಬ್ಬಳೇ ಕೂತು ಆಲೋಚಿಸಬೇಕು ಅಥವಾ ಡೈರಿಯಲ್ಲಿ ಬರೆಯಬೇಕು. ಅಂದಿನ ದಿನಾಂಕವನ್ನು ಹಾಕಿ ಡೈರಿಯಲ್ಲಿ 'ಸುಮುಖನೆಂದರೆ ನನಗೆ ಇಷ್ಟ ಅನಿಸುತ್ತಿದೆ. ಆದರೆ ಇದು ಪ್ರೇಮವೇ ಕಾದು ನೋಡಬೇಕು' ಎಂದು ಬರೆಯುತ್ತಾಳೆ.

ಸ್ವಲ್ಪ ಸಮಯ ಕಳೆಯುತ್ತದೆ. ಸುಮುಖನ ಸುಳಿವೇ ಇಲ್ಲ. ಸೌಮ್ಯಳಿಗೆ ಅವನನ್ನು ಮತ್ತೆ ನೋಡಬೇಕೆಂಬ ಚಡಪಟಿಕೆ. ಫೋನ್ ನಂಬರನ್ನು ಕೂಡ ತೆಗೆದುಕೊಂಡಿರುವುದಿಲ್ಲ ಜಾನಕಮ್ಮನೊಡನೆ ಸಂಭಾಷಿಸುವಾಗ ತಿಳಿಯುತ್ತದೆ, ಅವನು ಸ್ನೇಹಿತರ ಕೂಡ ಊರೂರು ಸುತ್ತಲು ಹೋಗಿದ್ದಾನೆಂದು. ವಿಷಯ ತಿಳಿದು ಸುಮ್ಮನಾಗುತ್ತಾಳೆ.

ಎರಡು ವಾರದ ನಂತರ ಮತ್ತೆ ಸಿಗುತ್ತಾನೆ ಸುಮುಖ. ಬಟ್ಟೆ ಅಂಗಡಿಗೆ ಡ್ರೆಸ್ ತೆಗೆದುಕೊಳ್ಳಲು ಹೋಗಿರುತ್ತಾಳೆ ಸೌಮ್ಯ. ಅಲ್ಲಿ ಸುಮುಖನೂ ಟೀ ಶರ್ಟ್, ಜರ್ಕಿನ್ ಕೊಳ್ಳಲು ಬಂದಿರುತ್ತಾನೆ. ಇವಳೇ ಎರಡು ಟೀ ಶರ್ಟ್‌ಗಳನ್ನೂ ಆರಿಸಿ ಕೊಡುತ್ತಾಳೆ. ಅವು ಅವನಿಗೆ ಇಷ್ಟವಾಗುತ್ತದೆ.

"ಗುಡ್ ಸೆಲೆಕ್ಷನ್!"

"ಥ್ಯಾಂಕ್ಯೂ"

"ಇವತ್ತು ಬರ್ತೀರಾ ಲಾಂಗ್ ಡ್ರೈವ್ ?!"

"ಬೇಡ ಬೇಡ. ಇನ್ನೊಂದು ದಿನ ಬರ್ತೀನಿ. ಇಲ್ಲೇ ನನ್ನ ಫ್ರೆಂಡ್ ಮನೆ ಇದೆ. ಹತ್ತಿರದಲ್ಲಿ" ಎಂದು ಸೌಮ್ಯ ಬೈ ಹೇಳಿ ಅವಸರದಲ್ಲಿ ಹೊರಟು ಬಿಡುತ್ತಾಳೆ. ಸುಮುಖ "ಓಕೆ" ಎಂದು ಏನೂ ವಿಚಲಿತನಾಗದೆ ಕಾರ್ ಸ್ಟಾರ್ಟ್ ಮಾಡಿ ಹೊರಟುಬಿಡುತ್ತಾನೆ.

ಗೆಳತಿ ಪ್ರಜ್ಞಾಳ ಮನೆಗೆ ಬಂದ ಸೌಮ್ಯ ಸುಮುಖನ ಬಗ್ಗೆ ಹೇಳಿಕೊಂಡಾಗ ತುಸು ಸಮಾಧಾನವಾಗುತ್ತದೆ. ಪ್ರಜ್ಞಾ ಸೌಮ್ಯಳಿಗಿಂತ ಆಧುನಿಕವಾಗಿ ಮುಂದುವರೆದ ಹುಡುಗಿ. ಅವಳು "ಹೋಗ್ಬಾರ್ದಿತ್ತೇನೇ ಲಾಂಗ್ ಡ್ರೈವ್? ಎಷ್ಟೊಳ್ಳೆ ಚಾನ್ಸ್‌ನ ಮಿಸ್ ಮಾಡ್ಕೊಂಡ್ಲಲ್ಲ... ನನ್ನನ್ನು ಕರೆದ್ರೆ ಹೋಗಿಡ್ತಿದ್ದೆ"

"ಹೋಗೇ! ಸುಮ್ ಸುಮ್ಮೆ ಅವನು ಕರೆದ ಅಂತ ಎಲ್ಲೆಲ್ಲೋ ಹೋಗ್ತಿಡಕ್ಕಾಗುತ್ತಾ ಮರ್ಯಾದೆ ಪ್ರಶ್ನೆ"

"ಹೋಗೇಲೇ ಗರತಿ ಗೌರಮ್ಮ ಯಾವ ಕಾಲಲ್ಲಿದೀಯ ಲಿವಿಂಗ್ ರಿಲೇಶನ್ ಕಾಲ

"ಆಗ್ಲಿ ಕಣೆ. ಅಂಥ ರಿಲೇಶನ್ ಸಾಧ್ಯ ಆಗ್ಬೇಕಲ್ಲ....!" ಸೌಮ್ಯ ಗೆಳತಿಯ ಅನಿಸಿಕೆಯನ್ನು ನಯವಾಗಿ ನಿರಾಕರಿಸಿ ಸ್ವಲ್ಪ ಸಮಯ ಅವಳ ಮನೆಯಲ್ಲಿದ್ದು ಆಶ್ರಮಕ್ಕೆ ಹೊರಟಳು. 'ನಾನು ಸುಮುಖನೊಡನೆ ಅಂದು ನಂತರ ರಾತ್ರಿ ಡೈರಿಯಲ್ಲಿ ಹೀಗೆ ಬರೆದಳು ಲಾಂಗ್ ಡ್ರೈವ್ ಹೋಗೇಕಿತ್ತೇ? ಅದು ಅಷ್ಟು ಸುಲಭವೇ?'

******

ಸೌಮ್ಯಳ ಗೆಳತಿ ಪ್ರಜ್ಞಾ ತಾನು ಪ್ರೀತಿಸಿದ ಹುಡುಗನೊಡನೆ ಮುಂದುವರೆದು ಹೀಗೇ ಲಾಂಗ್ ಡ್ರೈವ್ ಹೋಗಿದ್ದಾಗೊಮ್ಮೆ ನಿರ್ಜನ ಪ್ರದೇಶದ ಮರಳುಗುಡ್ಡೆಯ ಬಳಿ ಅವರಿಬ್ಬರ ದೈಹಿಕ ಸಂಪರ್ಕವೂ ಆಗಿ ಮುಂದೆ ಪ್ರಜ್ಞಾ ಮದುವೆಯಿಲ್ಲದೆ ಗರ್ಭಿಣಿಯಾಗಿ ಅದನ್ನು ಮನೆಯಲ್ಲಿ ಹೇಳುವುದು ಕಷ್ಟವೆಂದು ಅಬಾರ್ಶನ್ ಮಾಡಿಸಿಕೊಂಡಿದ್ದಳು. ಸೌಮ್ಯಳೊಡನೆ ಅಬಾರ್ಶನ್ ವಿವರಕೊಟ್ಟು ದುಃಖ ಹಂಚಿಕೊಂಡಿದ್ದಳು. "ಯಮ ಯಾತನೆ. ಗರ್ಭಕೋಶದೊಳಗೆ ಇಕ್ಕಳ ದಬ್ಬಳಗಳಂಥ ಅದೆಂಥದ್ದೋ ಆಯುಧ ಹಾಕಿ ಭ್ರೂಣವನ್ನು ಎಳೆಯುತ್ತಾರೆ ಕಣೆ, ನಂತರ ಪುಟ್ಟ ಪುಟ್ಟ ಭ್ರೂಣದ ಮಾಂಸದ ತುಂಡುಗಳನ್ನು ಬೇಸಿನ್ನಲ್ಲಿಟ್ಟು ತೋರಿಸುತ್ತಾರೆ ಆಗ ಅಳು ಬರುತ್ತದೆ. ಮಗು ಹೆತ್ತ ಹಾಗಲ್ಲ, ಏನೂ ಅಲ್ಲ. ಯಾರಿಗೂ ಬೇಡ ಈ ಹಿಂಸೆ..." ಇದಾದ ನಂತರ ಪ್ರಜ್ಞಾ ತಾನು ಮದುವೆಯಾದರೂ ತನಗೆ ಮಗುವೇ ಬೇಡ ಎಂಬ ಮನಸ್ಥಿತಿಗೆ ಬಂದು ಅವಳ ಡೈವೋರ್ಸ್ ಆಗಿ ಆಯ್ಯೋ ದೇವಾ.... ಈಗ ಮತ್ತೆ ಯಾರಾದರೂ ತನ್ನನ್ನು ಪ್ರೀತಿಸುವ ಹುಡುಗ ಸಿಗಬಾರದೇ? ಎಂದು ಹಲುಬುತ್ತ ಕಾಯುತ್ತಿದ್ದಾಳೆ. ಅವಳನ್ನು ನೋಡಿದ ಸೌಮ್ಯಳಿಗೆ ಸುಮುಖನೊಡನೆ ಲಾಂಗ್ ಡ್ರೈವ್ ಆಸೆಯೇ ಬತ್ತಿ ಹೋಯಿತು. 'ಲಾಂಗ್ ಡ್ರೈವ್' ಎಂದರೆ ಏನೋ ನಡೆಯಬಾರದ್ದು ನಡೆಯುತ್ತದೆ ಎಂಬ ಭೀತಿ ಅವಳಲ್ಲಿ ನೋಡಿದರೆ ಕಣ್ತಪ್ಪಿಸಿ ನಡೆಯಲು. ಶುರುವಾಯಿತು. ಸುಮುಖನನ್ನು ಅಕಸ್ಮಾತ್ ಆರಂಭಿಸಿದಳು ಮತ್ತು ಡೈರಿಯಲ್ಲಿ ಬರೆದಳು.

'ನನಗೆ ಲಾಂಗ್ ಡ್ರೈವ್ ಎಂದರೆ ಹೆದರಿಕೆ ಏಕೆಂದರೆ ನನ್ನ ಗೆಳತಿ ಅವಳ ಬಾಯ್ ಫ್ರೆಂಡ್ ಜೊತೆ ಲಾಂಗ್ ಡ್ರೈವ್ ಹೋಗಿ ಹಾಳಾಗಿದ್ದಾಳೆ.'

*****

ಸುಮುಖ ವಿದೇಶದಲ್ಲಿದ್ದು ಗೆಳತಿಯರ ಒಡನಾಟವಿದ್ದರೂ ಲಂಪಟನಾಗಿರಲಿಲ್ಲ. ಸೌಮ್ಯಳ ಬಗ್ಗೆ ಅವನಿಗೂ ಒಂದು ಮೃದು ಭಾವ ಮೂಡಿತ್ತು. ಲಕ್ಷಣವಾಗಿದ್ದಾಳೆ, ಮುಗ್ಧಳು. ಎಂದು ಅವನ ಮನಸ್ಸು ನುಡಿಯುತ್ತ ಅವಳೆಡೆಗೇ ಚಲಿಸುತ್ತಿತ್ತು. ಇದನ್ನು ತನ್ನ ತಾಯಿ. ಜಾನಕಮ್ಮನ ಬಳಿಯೂ ಹೇಳಿದಾಗ ಅವರಿಗೆ ಖುಷಿಯಾಗಿ "ಮೊದಲು ಒಂದು ಕೆಲಸ ಹುಡುಕಿಕೋ ಮಗಾ.... ಅಥವಾ ಹಳ್ಳಿಯಲ್ಲಿರುವ ಕೃಷಿಯನ್ನಾದರೂ ಮುಂದುವರೆಸು... ನಂತರ ಸೌಮ್ಯಳ ಜೊತೆ ಮದುವೆ ಪ್ರಸ್ತಾಪ ಮಾಡಲು ಸರಿಹೋಗುತ್ತದೆ". ಎಂದು ಸಲಹೆ ಕೊಟ್ಟರು. ಸುಮುಖ ಸೌಮ್ಯಳ ಜೊತೆ ತಾನೊಂದು ಲಾಂಗ್ ಡ್ರೈವ್

ಹೋಗಿ ಬರಬೇಕೆಂಬ ಆಸೆಯನ್ನು ತಾಯಿಯಲ್ಲಿ ಹೇಳಿದ. ತಾಯಿಗೆ ತಪ್ಪೇನಿಲ್ಲ ಎನಿಸಿತು. ಸೌಮ್ಯಳನ್ನು ಕರೆದು "ಸುಮುಖನಿಗೆ ಊರಿನಲ್ಲಿ ಸುಂದರ ಪ್ರಕೃತಿ ಎಲ್ಲೆಲ್ಲಿದೆ ಎಂದೆಲ್ಲಾ ಗೊತ್ತಿದೆ. ನಿನಗೆ ತುಂಬಾ ಖುಷಿಯಾಗುತ್ತೆ. ಹೋಗಿ ಬಾ." ಎಂದರು. ಆಶ್ರಮದ ಮುಖ್ಯಸ್ಥೆಯ ಅಧಿಕೃತ ಅನುಮತಿ ದೊರೆತು 'ಲಾಂಗ್ ಡ್ರೈವ್' ಬಗ್ಗೆ ತುಂಬ ಹೆದರಿಕೆಯಿದ್ದರೂ ದಾಕ್ಷಿಣ್ಯವೂ ಆಗಿ ಒಪ್ಪಿಕೊಂಡಳು.

ಅಂದು ಸುಮುಖ ಅವಳ ಕಾಲೇಜ್ ಬಳಿಯೇ ಬಂದು ಅವನಿಷ್ಟದ ಲಾಂಗ್ ಡ್ರೈವ್‌ಗೆ ಕರೆದುಕೊಂಡು ಹೋದ. ಉಲ್ಲಾಸದಿಂದಿದ್ದ. ಯಥಾ ಪ್ರಕಾರ ಸೀಟ್ ಬೆಲ್ಟ್ ಹಾಕಿದ. ಸೌಮ್ಯಳಿಗೆ ರೋಮಾಂಚನ. 'ಏನು ಯೋಚಿಸುತ್ತಿದ್ದೀರಿ ಸೌಮ್ಯ ದೇವತೆ?' ಎಂದ. ಅವರ ಸಂಭಾಷಣೆ ಲಾಂಗ್ ಡ್ರೈವ್ ಉದ್ದಕ್ಕೂ ಸಾಗಿತು..

ನಕ್ಕಳು. "ನಿಮ್ಮ ಮನಸಲ್ಲಿ ಏನೇನಿದೆ ಅಂತ ಯೋಚೆ ಮಾಡ್ತಿದೀನಿ" ಎಂದು ತುಂಟ ನಗೆ ನಕ್ಕಳು.

ಅಷ್ಟರಲ್ಲಿ ಅವನ ಮೊಬೈಲ್‌ಗೆ ಒಂದು ಫೋನ್ ಬಂತು. ಯಾವುದೋ ಹುಡುಗಿ ಇರಬೇಕು. ಇಂಗ್ಲೀಷಲ್ಲಿ ಮಾತಾಡಿ ಇಟ್ಟ. ಕಾರಿನ ಪೆಟ್ರೋಲ್ ಕಡಿಮೆಯಾಗುತ್ತಿದೆ ಎಂದೆನಿಸಿತು, ಸುಮುಖನಿಗೆ. ಅಲ್ಲೇ ಪೆಟ್ರೋಲ್ ಬಂಕ್ ಬಳಿ ಇಳಿದರು. ಅವನು ಪರ್ಸ್ ತೆಗೆಯುವಾಗ ಗಮನಿಸಿದಳು. ಅದರಲ್ಲಿ ಮಾಡ್ರನ್ ಆಗಿರುವ ಒಂದು ಹುಡುಗಿ ಫೋಟೋ ಇತ್ತು. ಸೌಮ್ಯಳಿಗೆ ಏನೋ ಇರಿಸು ಮುರಿಸಾಯಿತು. ಆದರೂ ಅವನನ್ನು ಕೇಳುವುದು ಸರಿಯೆಂದು "ಪರ್ಸ್‌ಲ್ಲಿದ್ದ ಫೋಟೋ ಯಾರದು? ನಾನೂ ನೋಡಹುದಾ?" ಎಂದು ಕೇಳಿಬಿಟ್ಟಳು. ಅಷ್ಟಕ್ಕೆ ಕುಪಿತನಾದ ಸುಮುಖ "ನಿಮ್ಮ ಪರ್ಸನ್ನು ನೋಡುತ್ತೇನೆ ಎಂದು ನಾನು ಹೇಳಿದೆನಾ? ಎಷ್ಟು ಸಣ್ಣ ಬುದ್ದಿ ನಿಮ್ಮ. ಲಾಂಗ್ ಡ್ರೈವ್ ಬೇಡ. ಏನೂ ಬೇಡ. ನಡೀರಿ ವಾಪಸ್." ಎಂದು ಹಿಂದುರುಗಿ ಆಶ್ರಮಕ್ಕೆ ಕರೆತಂದು ಬಿಟ್ಟು ಕಾರನ್ನು ವೇಗವಾಗಿ, ಅವಮಾನದಿಂದ ಹೋದ. ಸೌಮ್ಯಳಿಗೆ ಹೋಗುವಂತಾಯಿತು. ಬಲವಂತವಾಗಿ ಅಳು ನುಂಗಿಕೊಂಡು ಯಾರ ಬಳಿಯೂ ಮಾತಾನಾಡಲೂ ಆಗದೆ ತನ್ನ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಒಂದು ಹಂತದಲ್ಲಿ ಬಿಕ್ಕಳಿಕೆ ಬಂದಾಂತಾಗಿ ಮುಂದೆ ಮಾತೇ ಹೊರಡದಂಥ ಸ್ಥಿತಿಯಾಗಿ ಬಿಟ್ಟಿತು. ಮುಖ ಖಿನ್ನತೆಯಿಂದ ಬಾಡಿದಂತಾಯಿತು. ಜಾನಕಮ್ಮ ಬಂದು ತಲೆ ನೇವರಿಸಿದರೂ ಅವಳು ಮಾತಾಡಲ್ಲ. ಬೇರೆ ಹಿರಿಯ ಹೆಂಗಸರು ವಾತ್ಸಲ್ಯದಲ್ಲಿ ಮಾತಾನಾಡಿಸಲು ಬಂದರೂ ಅವಳು ಮಾತಾನಾಡದ ಸ್ಥಿತಿಗೆ ಬಂದಿದ್ದಾಳೆ. ಹೂದಾನಿ ಮಂಕಾಗಿದೆ. ಹೂಗಳ ನಗು ಈಗ ಯಾರ ಕೊಠಡಿಯಲ್ಲೂ ಇಲ್ಲ.

ಜಾನಕಮ್ಮನಿಗೆ ಹೆದರಿಕೆ. ಹೊರಗೆ ಕರೆದುಕೊಂಡು ಹೋದ ತನ್ನ ಮಗನಿಂದ ಏನಾದರೂ ಅಚಾತುರ್ಯವಾಯಿತೇ?... ಎಂದು

ಮಗನನ್ನು ಕೇಳಿದರು. ಇರುವ ವಿಷಯವನ್ನು ಹೇಳಿದನು. ಜಾನಕಮ್ಮ ಮಗನಿಗೆ ಬುದ್ದಿವಾದ ಹೇಳಿದರು.

"ಮಗ ನಿನ್ನೆಲೆ ಪೀತಿ ಹುಟ್ಟಿರೋದ್ರಿಂದ ತಾನೇ ಹಾಗೆ ಪ್ರಶ್ನೆ ಮಾಡಿದಾಳೆ. ಒಬ್ರಿಗೊಬ್ರು ಚೆನ್ನಾಗಿ ಅರಿತರಲ್ಲವೇ ಮುಂದೆ ಬದುಕಲು ಸಾಧ್ಯ!."

ಸುಮುಖ "ಹಾಗೆಲ್ಲಾ ಪಾರದರ್ಶಕವಾಗಕ್ಕೆ ನನಗೆ ಇನ್ನೂ ಸ್ವಲ್ಪ ಸಮಯ ಬೇಕಮ್ಮ." ಎಂದ.

ಸುಮುಖನ ವೈಯಕ್ತಿಕ ಜೀವನದಲ್ಲಿ ಏನಾಗಿತ್ತೋ ಯಾರಿಗೆ ಗೊತ್ತು? ಅದನ್ನೆಲ್ಲಾ ಲಾಂಗ್ ಡ್ರೈವಲ್ಲಿ ತನ್ನೊಡನೆ ಹಂಚಿಕೊಳ್ಳುವನು ಎಂದು ಸೌಮ್ಯ ತಿಳಿದಿದ್ದಳು. ಅವನ ಸ್ಪರ್ಶ, ಮಾತು ಎಲ್ಲಾ ಅವಳನ್ನು ಅವನ ಸನಿಹ ತಂದಿದ್ದವು. ಆದರೆ ಸುಮುಖ ತನ್ನ ಈಗೋವನ್ನೇ ಬೆಳೆಸಿಕೊಂಡು ದುಡುಕಿ ಮಾತಾಡಿ ಸೌಮ್ಯಳನ್ನು ಅವಮಾನಿಸುವಂತೆ ಲಾಂಗ್ ಡ್ರೈವ್ ಮೊಟಕುಗೊಳಿಸಿ ಕೋಪ ಮಾಡಿಕೊಂಡು ವಾಪಸ್ ಕರೆತಂದಿದ್ದ ಈ ಕೋಪ ಸೌಮ್ಯಳ ಸುಪ್ತ ಮನಸ್ಸಿನ ಮೇಲೆ ವಿಪರೀತ ಪರಿಣಾಮ ಬೀರಿ ಅವಳ ಬ್ಲಡ್ ಪ್ರೆಶರ್ ಕೂಡ ವ್ಯತ್ಯಾಸವಾಗಿ ಅವಳೀಗ ಖಿನ್ನಳಾಗಿ ಹಾಸಿಗೆ ಹಿಡಿದಿದ್ದಾಳೆ. ಮಾತೇ ಆಡುವುದಿಲ್ಲ. ಮಾತಾಡಲು ಪ್ರಯತ್ನಿಸುವುದಿಲ್ಲ. ಆ ದಿನ ಡೈರಿಯಲ್ಲಿ ಬರೆದಿದ್ದಾಳೆ. 'ಪ್ರೀತಿಸುವವರನ್ನು ಅರ್ಥ ಮಾಡಿಕೊಳ್ಳಲು ಪ್ರಶ್ನಿಸುವುದು ತಪ್ಪೇ? ಅವರು ಎಲ್ಲವನ್ನು ಹಂಚಿಕೊಳ್ಳಬೇಕಲ್ಲವೆ?...'

'ಮಿಡಿವ ಹೃದಯ ಮಹಿಳಾ ಸೇವಾ ಸದನ' ಒಬ್ಬಳು ಸೌಮ್ಯಳಿಂದ ಎಷ್ಟೊಂದು ಲವಲವಿಕೆಯಿಂದಿತ್ತು. ಆದರೆ ಇಂದು ಅವಳ ಖಿನ್ನತೆ ಇಡೀ ಸದನದ ಖಿನ್ನತೆಯಾಗಿ ಮಿಡಿವ ಹೃದಯ ಮೌನವಾಗಿದೆ..

ಮನೋವೈದ್ಯರ ಬಳಿ ಸೌಮ್ಯಳನ್ನು ಕರೆತರಲಾಯಿತು. ಅವರು ಸೌಮ್ಯಳನ್ನು ತುಂಬಾ ವಿಶ್ವಾಸದಿಂದ ಕಂಡು ಅಗತ್ಯವಿದ್ದ ಒಂದು ಇಂಜೆಕ್ಷನ್ ಕೊಟ್ಟು ಅವಳು ಸ್ವಲ್ಪ ಸುಧಾರಿಸಿಕೊಂಡ ಮೇಲೆ ಅವಳ ಮನಸ್ಸಿನಲ್ಲಾಗುತ್ತಿರುವುದನ್ನು ಬರೆದು ತೋರಿಸಲು ಹೇಳಿದರು. ಸದ್ಯ ಬರೆದಳು ಸೌಮ್ಯ!

'ನನ್ನನ್ನು 'ಸೌಮ್ಯ ದೇವತೆ' ಎಂದು ಕರೆದರು. ಲಾಂಗ್ ಡ್ರೈವ್ ಹೋಗೋಣ ಎಂದರು. ನಾನು ಅವರೊಡನೆ ಇಡೀ ಬಾಳ ಪಯಣ ಲಾಂಗ್ ಡ್ರೈವ್ ಹೋಗಬೇಕೆಂದಿದ್ದೆ ಆರಂಭದಲ್ಲೇ ಪರ್ಸ್ ತೋರಿಸುವ ಒಂದು ಚಿಕ್ಕ ವಿಷಯಕ್ಕೆ ನನ್ನನ್ನು ಅವಮಾನಿಸಿಬಿಟ್ಟರು. ಇನ್ನು ನನಗೆ ಅವರ ಮೊಬೈಲ್ ತೋರಿಸುತ್ತಾರಾ?... ಮೊದಲೇ ಅನಾಥೆ ನಾನು. ಹೃದಯವನ್ನೇ ನಂಬಿಕೊಂಡವಳು. ಇವರನ್ನು ಹೇಗೆ ನಂಬಲಿ? ನನ್ನ ಪ್ರೀತಿಗೆ ಗೌರವ ಸಿಗಲಿಲ್ಲ.

ಅಷ್ಟು ಬರೆದು ಕೊಡುವಾಗ ಮತ್ತೆ ಸೌಮ್ಯಳಿಗೆ ಅಳು ಉಕ್ಕಿ ಬಂದು ಬವಳಿ ಬಂದಂತಾಗಿ ನಿದ್ದೆ ಹೋದಳು.

ಆಸ್ಪತ್ರೆ ಹೊರಗಡೆ ಕಾಯುತ್ತಿದ್ದ ಸುಮುಖ ಪೆಚ್ಚಾಗಿದ್ದಾನೆ. ವಿದೇಶದ ಹೆಣ್ಣು ಮಕ್ಕಳನ್ನು ನೋಡಿ ಅಭ್ಯಾಸವಾದ ಸುಮುಖನಿಗೆ ಸೌಮ್ಯಳೂ ಅದೇ ರೀತಿ ಭಾವುಕತೆಯಿಲ್ಲದೆ ಗಟ್ಟಿಯಾಗಿರುವ ಹೆಣ್ಣು ಎಂದು ತಿಳಿದಿದ್ದ. ಆದರೆ ಸೌಮ್ಯ ಸೂಕ್ಷ್ಮಮತಿ ಮತ್ತು ಸುಮುಖನನ್ನು ನಿಜವಾಗಿ ಪ್ರೀತಿಸಿದವಳು. ಲಾಂಗ್ ಡ್ರೈವ್ ಹೋಗಬೇಕಾದರೆ ಯಾವ ಮುಚ್ಚುಮರೆ ಇರಬಾರದು. ಎಂಬ ಅವಳ ಆಲೋಚನೆಗೆ ಬಲವಾದ ಪೆಟ್ಟು ಬಿದ್ದಿತ್ತು.

*****

ಮನೋವೈದ್ಯರು ಜಾನಕಮ್ಮ ಹಾಗೂ ಸುಮುಖನನ್ನು ಕರೆದು ಸೌಮ್ಯಳ ಕೇಸ್ ಹಿಸ್ಟರಿಯನ್ನು ವಿವರಿಸಿದರು.

ಹುಡುಗಿ ಸೂಕ್ಷ್ಮಮತಿ, ಸ್ವಾಭಿಮಾನಿ, ಮತ್ತು ಪ್ರಮಾಣಿಕಳು. ಮತ್ತು ಸುಮುಖನನ್ನು ಆಳವಾಗಿ ಪ್ರೀತಿಸುತ್ತಿದ್ದಾಳೆ. ಅವನೂ ತನ್ನನ್ನು ಪ್ರೀತಿಸುತ್ತಿದ್ದಾನೆ ಎಂದು ತಿಳಿದು ಅವನ ಪರ್ಸನ್ನು, ಅದರಲ್ಲಿರುವ ಹುಡುಗಿ ಫೋಟೋವನ್ನು ನೋಡ ಬಯಸಿದಳು. ಸುಮುಖ ಅವಳನ್ನು ಪ್ರೀತಿಸಿದ್ದರೆ ಒಡನೆಯೇ ಫೋಟೋ ತೋರಿಸಿ ಇರುವ ವಿಷಯವನ್ನು ಹೇಳುತ್ತಿದ್ದ ಎಂದು ಸೌಮ್ಯಳ ಲೆಕ್ಕಾಚಾರ. ಅದನ್ನು ಹೇಗೆ ತಪ್ಪು ಎನ್ನಲು ಸಾಧ್ಯ? ನಿನಗೊಂದು

ಭಾವಗೀತೆಯನ್ನು ಕೇಳಿಸುತ್ತೇನೆ ಕೇಳು, ಸುಮುಖ ಎಂದು 'ಮುಚ್ಚುಮರೆ 'ಇಲ್ಲದೆಯೇ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಹೇ ಗುರುವೆ ಅಂತರಾತ್ಮ...' ಎಂಬುದನ್ನು ಕೇಳಿಸಿದರು. ಆಗ ಜಾನಕಮ್ಮ "ಅಯ್ಯೋ ಇದು ಸೌಮ್ಯಳಿಗೆ ಇಷ್ಟವಾದ ಭಾವಗೀತೆ, ಕುವೆಂಪು ಅವರು ಬರೆದಿರುವುದು. ಅವಳಿದನ್ನು ಹಾಡಿಕೊಳ್ಳುತ್ತಿರುವುದನ್ನು ಕೇಳಿದ್ದೇನೆ" ಎಂದು ಕಂಬನಿ ಮಿಡಿದರು. ಸುಮುಖನಿಗೆ "ನೀನು ಅವಳಿಗೆ ನಿಧಾನವಾಗಿ ಹೇಳಬೇಕಿತ್ತು ಮತ್ತು ಅದಕ್ಕಾಗಿ ರಪ್ಪೆಂದು ಮುಖಕ್ಕೆ ಹೊಡೆದಂತೆ ವಾಪಸ್ ಕರೆದುಕೊಂಡು ಬಂದು ಬಿಡಬೇಕಿರಲಿಲ್ಲ." ಎಂದು ಛೀಮಾರಿ ಹಾಕಿದರು.

ಸುಮುಖನಿಗೆ ಅಲ್ಲಿಯವರೆಗೆ ತಾನೆಂಥ ಅಪರಾಧ ಮಾಡಿದ್ದೇನೆ ಎಂದು ತಿಳಿದೇ ಇರಲಿಲ್ಲ. ಅವನ ಮನಸ್ಸಿಗೆ ಸೌಮ್ಯ ಮೊದಲಿನಂತಾಗಲಿ ಎಂದು ಹಂಬಲಿಸುತ್ತಿದೆ. ಆದರೆ ಅದಕ್ಕೆ ಸಮಯ ಹಿಡಿಯುತ್ತದೆ. ಒಂದು ಮೂಳೆ ಮುರಿದರೆ ಅದು ಸರಿ ಹೋಗಲು ಎಷ್ಟೊಂದು ಸಮಯ ತೆಗೆದುಕೊಳ್ಳುತ್ತದೆ. ಹಾಗೇ ಅಲ್ಲವೇ ಮನಸ್ಸು?!

ಸೌಮ್ಯಳನ್ನು ಆಶ್ರಮದ ಅವಳ ಕೊಠಡಿಗೆ ತಂದು ಮಲಗಿಸಿದ್ದಾರೆ. ಅವಳ ಕೊಠಡಿಯ ಹೂದಾನಿಯೊಳಗೆ ಹೂಗಳನ್ನು ತಂದು ಜೋಡಿಸಿಟ್ಟ ಸುಮುಖ.

"ಒಮ್ಮೆ ನಗು, ಮಾತಾಡು ಸೌಮ್ಯ... ನನಗೆ ಸ್ವಲ್ಪ ಸಮಯ ಕೊಡು. ಒಂದು ದಿನ ನಿನ್ನಿಷ್ಟದಂತೆ ನಿನ್ನನ್ನು ಲಾಂಗ್ ಡ್ರೈವ್ ಕರೆದುಕೊಂಡು ಹೋಗುತ್ತೇನೆ..." ಎಂದು ಕಂಬನಿ ತುಂಬಿಕೊಂಡಿದ್ದಾನೆ.

ಸೌಮ್ಯ ನಗಲು, ಮಾತಾನಾಡಲು ಪ್ರಯತ್ನಿಸುತ್ತಿದ್ದಾಳೆ. ಇನ್ನೂ ಸಾಧ್ಯವಾಗುತ್ತಿಲ್ಲ. ಎಲ್ಲದಕ್ಕೂ ಕಾಲವೇ ಮದ್ದು. ●

## ಹಾತೂನಿಕಾ ಎಂಬ ಕನಸು

ಮಣ್ಣಿನ ಮೇಲೆ ಕೊರೆದ ನಗ್ನ ಯೋಧನೊಬ್ಬನ ಚಿತ್ರವನ್ನು ನೆನಪಾಗಿ ಕೊಟ್ಟಿದ್ದಳು. ಅವಳ ಕಣ್ಣುಗಳು ಹನಿಗೂಡಿದ್ದವು.

"ಯೂ ಆರ್ ಯೆ ವೆರಿ ಗುಡ್ ಮ್ಯಾನ್ ಮರ್ಟ್" ಎಂದು ಅವಳು ಹತ್ತಿರ ಬಂದು ಬೆನ್ನು ತಟ್ಟಿದಾಗ ಅವಳ ಬಿಸಿಯುಸಿರು ತಟ್ಟಿ ಕಸಿಪಿಸಿಯಾದರೂ ಅವನನ್ನೇನೋ ಕಟ್ಟಿ ಹಾಕಿತು. ಕೈ ಬೀಸುತ್ತಲೇ ಕಣ್ಣರೆಯಾಗಿದ್ದಳು. ಇದೆಲ್ಲಾ ನಲವತ್ತು ವರ್ಷಗಳ ಹಿಂದೆ ನಡೆದದ್ದು.

ಆದರೆ ಇಂದಿಗೂ ಸಂಜೆಯ ಮಬ್ಬಿನ ಕ್ಷಣಗಳಲ್ಲಿ ಅಂದು ತಾನೆಷ್ಟು ಒಳ್ಳೆಯವನಾಗಿರಬೇಕಾದ ಅವಶ್ಯಕತೆಯಿತ್ತೇ, ಇದ್ದಿದ್ದರೆ ಅವಳ ನೆನಪು ಇಂದಿಗೂ ತನ್ನಲ್ಲೇಕೆ ವಿಚಿತ್ರ ಅಸಂತೃಪ್ತಿ ಹುಟ್ಟಿಸುತ್ತಿದೆ ಎಂದೆಲ್ಲ ಪ್ರಶ್ನೆಗಳು ಎದ್ದು ಕೊಂಚ ಹೊತ್ತು ಅವನ ಮನಸ್ಸು ತಲ್ಲಣಗೊಳುತ್ತದೆ. ಆದರೆ, ಹಾಗಿರುವುದರಿಂದಲೇ ಅವಳು ತನ್ನೊಳಗೆ ಇನ್ನೂ ನಿಂತಿದ್ದಾಳಲ್ಲವೇ ಎಂಬ ಲಹರಿ ಹಾದು ಹೋಗಿ ಸಣ್ಣ ನಗುವೂ ಬರುತ್ತದೆ.

## ವಿಗ್

ಅವರು ಒಬ್ಬರನ್ನೊಬ್ಬರು ನೋಡುವ ಕಾರ್ಯಕ್ರಮ ನಡೆದಾಗ ಅಂಥ ಚಿಕ್ಕವರೇನಲ್ಲ. ಅವಳಿಗೆ ಮೂವತ್ತು. ಅವನಿಗೆ ಮೂವತ್ತೆಂಟು. ಈಗಲೇ ಬೇಡ, ಒಂದು ಮನೆ ಮಾಡಬೇಕು, ಕೆಲಸ ಪರ್ಮನೆಂಟ್ ಆಗಲಿ, ಶಾರದೂ ಮದುವೆ ಮೊದಲು ಎಂದೆಲ್ಲಾ ಮುಂದೆ ಹಾಕುತ್ತಾ ಹೋಗಿ ಅವನ ಮದುವೆ ತಡವಾಗಿತ್ತು. ತಲೆಗೂದಲು ಉದುರಿತ್ತು. ಕೊಂಚ ಕಪ್ಪು, ಸ್ವಲ್ಪ ಕುಳ್ಳು. ಇನ್ನಿಷ್ಟು ಓದಿದ್ದರೆ ಚೆನ್ನಾಗಿತ್ತು. ಅಂಥಾ ಅನುಕೂಲವಾಗಿ ಏನಿಲ್ಲ – ಏನೇನೋ ಕಾರಣಗಳಿಂದ ಅವಳಿಗೆ ಮದುವೆ ಆಗಿರಲಿಲ್ಲ. ಮಿಡ್ಲ್ ಸ್ಕೂಲ್ ಟೀಚರಾಗಿ ಹತ್ತು ವರ್ಷ ಅನುಭವ ಮಾತ್ರ ಆಗಿತ್ತು.

ಎರಡೂ ಕುಟುಂಬಗಳು ಅಂದು ತರಕಾರಿ ಉಪ್ಪಿಟ್ಟು, ದೇಶಾವರಿ ನಗುವಿನ ನಡುವೆ ಮಾತಾಡುತ್ತಾ ಹೂಂ ಅನ್ನುವ ಸ್ಥಿತಿ ತಲುಪಿದ ಅರಿವಾದಾಗ. ಅವನು ಅವಳೊಡನೆ ಮಾತಾಡಬೇಕೆಂದು ತಾಯಿಯ ಹತ್ತಿರ ಮೆಲ್ಲಗೆ ಉಸುರಿದ. ಇಬ್ಬರೂ ಮನೆಯಿಂದ ಅರ್ಧ ಕಿಲೋ ಮೀಟರ್ ದೂರವಿದ್ದ ಪಾರ್ಕಿಗೆ ನಡೆದು, ಅಲ್ಲಿದ್ದ ಒಂದೇ ಮರದ ಕೆಳಗಿನ ಕಾದ ಸಿಮೆಂಟು ಬೆಂಚಿನ ಮೇಲೆ ಸಂಜೆಗತ್ತಲಲ್ಲಿ ದೂರದೂರವೇ ಕೂತರು.

"ಒಪ್ಪಿಗೇನಾ?"

ಅವಳು ತಲೆ ಹಾಕಿದಳು.

"ನೀವು ಹೂಂ ಅನ್ನೋಕೇ ಮೊದಲು, ಒಂದು ವಿಷಯ ಕ್ಲಿಯರ್ ಆಗಿ ಹೇಳಬೇಕು"

"ಏನು?"

"ನಾನು ವಿಗ್ ಹಾಕ್ಕೋತೀನಿ. ನೋಟಿಸ್ ಮಾಡಿದ್ರಾ?"

ಅವಳು ತಲೆ ಎತ್ತಿದಳು. ಇದುವರೆಗೂ ಗಮನಿಸಿಯೇ ಇರಲಿಲ್ಲ. ಅದರೂ ಅವನಷ್ಟು ಓಪನ್ ಆಗಿ ಹೇಳಿದ್ದರ ಬಗೆ ಅವಳಿಗೆ ಸಮಾಧಾನವಾಯಿತು.

"ಆದರೇನು? ನಾವೆಲ್ಲಾ ಲಿಪ್ಸ್ಟಿಕ್ ಹಚ್ಚಿಕೊಳ್ಳೋಲ್ಲೇನು?" ಥಟ್ಟನೆ ಕೇಳಿದಳು.

"ನಿಮಗೆ ಅಭ್ಯಾಸ ಇಲ್ಲದ್ದರೆ ಸರಿ." ಅವನು ಹಗುರವಾಗಿ ಹೇಳಿದ.

ಇಬ್ಬರೂ ಅಲ್ಲಿಂದೆದ್ದು ಮನೆಗೆ ಬಂದರು. ತಿಂಗಳಲ್ಲಿ ಅವರ ಮದುವೆಯಾಯಿತು. ಮೊದಲ ರಾತ್ರಿಯೇ ಪ್ರೇಮ ಮಾಡುವ ಮೊದಲು ಆತುರದಿಂದ ದೀಪ ಆಳರಿಸಿ, ತನ್ನ ವಿಗ್ ಕಳಚಿ, ಕೆದರಿದ ಕೂದಲು ಸರಿಪಡಿಸಿ, ಪಕ್ಕದಲ್ಲೇ ಇದ್ದ (ಅವಳು ಇದುವರೆಗೂ ಅಲಂಕಾರಕ್ಕೆಂದು ಇಟ್ಟ ಬೋಳು ತಲೆಗೊಂಬೆ ಎಂದುಕೊಂಡಿದ್ದ) ವಿಗ್ ಸ್ಟ್ಯಾಂಡಿಗೆ ಅದನ್ನು ಅವನು ಹಾಕಿದ್ದು. ಕಿಟಕಿಯಿಂದ ತೂರಿ ಬರುತ್ತಿದ್ದ ಬೀದಿದೀಪದ ಮಂದ ಬೆಳಕಿನಲ್ಲಿ ಅವಳಿಗೆ ನಿಚ್ಚಳವಾಗಿ ಕಂಡಿತು. ಕಣ್ಣು ಮುಚ್ಚಿದರೂ ಅವನು ಹತ್ತಿರ ಸರಿದಾಗ ಅವಳ ಮನಸ್ಸಿನಲ್ಲಿ ವಿಚಿತ್ರ ಗೊಂದಲ ಉಂಟಾಯಿತು.ಆ ಕ್ಷಣ ಅವಳಿಗೆ ಅರಿವಾಗಿತ್ತು ವಿಗ್ ಲಿಪ್ಸ್ಟಿಕ್ ನಂತಲ್ಲ. ಅದು ನಿಧಾನವಾಗಿ ಕರಗುವುದಿಲ್ಲ ಎಂದು. ●

# ಸೀಸದ ಕಡ್ಡಿಯ (Pencil) ಸೀಸವನ್ನು ಆಧ್ಯಾತ್ಮಿಕ ಹೊನ್ನಾಗಿ ಮಾಡಿನೋಡಿ....

✍ ವನಜಾ ರಾಜನ್

ಒಂದು ಕಾಲದಲ್ಲಿ 'ಬಾಲ್ ಪೆನ್' ಸರ್ವವ್ಯಾಪಕವಾಗಿ ಬಳಕೆಯಲ್ಲಿತ್ತು. ನಿಜ! ಈಗಿನ ಕಾಲದಲ್ಲಿ 'ಸೀಸದ ಕಡ್ಡಿ ಹಿಡಿದು ಬರೆಯುವವರು, ಇರುವರೇ? ಬಿಡಿ! ಬಹು ವಿರಳ! ಒಂದು ಸಂಜೆ ಈ ಬಗೆಯ ಯೋಚನೆಗಳು 'ತಲೆ' ಕೊರೆದಾಗ "ಸೀಸದ ಕಡ್ಡಿಯ ಸೃಷ್ಟಿ ಕರ್ತನ ಮಾತುಗಳು ನೆನಪಿಗೆ ಬಂದಿತು. ಸೀಸದ ಕಡ್ಡಿಯನ್ನು ಕಂಡು ಹಿಡಿದ ನಂತರ ತೃಪ್ತಿಗೊಂಡು ಅದನ್ನು ಯಶಸ್ವಿಯಾಗಿ ಬಳಕೆಗೆ ಮಾಡುವ ವಿಧಿ – ವಿಧಾನಗಳ ಬಗ್ಗೆ ಸ್ಥೂಲ ವಿವರಗಳನ್ನು ನೀಡಿದನು. ಅವನು ಸೀಸದ ಕಡ್ಡಿ"ಯನ್ನು ಉದ್ದೇಶಿಸಿ ಹೀಗೆ ಹೇಳುತ್ತಾನೆ....



1) ನಿನ್ನ ನಿಜವಾದ ಬೆಲೆ ನಿನ್ನ ಅಳದಲ್ಲಡಗಿದೆ. ಹೊರಗಡೆಗೆ ಆಕರ್ಷಕವಾಗಿಯೂ ಹೊಳಪಾಗಿರಬಹುದು. ಆದರೇನು? ಅದರಿಂದ ನಿನಗೇನೂ ಉಪಯೋಗವಿಲ್ಲ. ಒಳಗಿರುವುದರಲ್ಲಿ ಮಾತ್ರ ನಿನ್ನ ಸತ್ವ ಅಡಗಿದೆ.

2) ಮಾನವ ಸಮಾಜಕ್ಕೆ ನಿನ್ನಿಂದ ಏನಾದರೂ ಸೇವೆ ಸಲ್ಲಬೇಕಾದರೆ ನಿನ್ನ 'ಹೊರಪದರ'ವನ್ನು ಒಂದರ ನಂತರ.... ಒಂದನ್ನು ತೆಗೆದು ಹಾಕಬೇಕು... ಒಳಗಿನದನ್ನು ಚೂಪಾಗಿಸಬೇಕು. ಚುರುಕಾಗಿಸಬೇಕು. ಮೇಲ್ನೋಟಕ್ಕೆ ಕಷ್ಟವೆನಿಸಬಹುದು. ಅಮೂಲ್ಯವನ್ನು, ಕಳೆದು ಕೊಂಡಂತೆ ಅನಿಸಿಬಹುದು. ಆದರೆ.... ಹೊರಗಿನ ಮುಸುಕು ತೆಗೆಯದಿದ್ದರೆ, ನೀನು ಯಾರಿಗೂ ಯಾವುದಕ್ಕೂ ಪ್ರಯೋಜನವಿಲ್ಲ.

3) ಅಂತರಾಳದಲ್ಲಡಗಿರುವ ಆ ತಿರುಳಿನ ಮೇಲೆಯೇ ಮನಸ್ಸನ್ನು ಕೇಂದ್ರೀಕರಿಸಿದ್ದೇ ಆದರೆ ನೀನು ತೆಗೆದುಕೊಳ್ಳುವ ಪ್ರತಿ ಒಂದು ಹೆಜ್ಜೆಯಲ್ಲೂ ಯಶಸ್ಸನ್ನೇ ನೀನು ಪಡೆಯುವೆ.

4) ನಿನ್ನನ್ನು ನೀನೇ ಮತ್ತೊಬ್ಬರ ಅಧೀನಕ್ಕೆ ಒಳಪಡಿಸಿದ್ದೇ ಆದರೆ ಅತ್ಯುತ್ತಮ ಫಲಗಳನ್ನು ಪಡೆಯುವೆ! ಕುಶಲ ಕಲಾವಿದನ ಕೈಯಲ್ಲಿ ನಿನ್ನನ್ನು ಒಪ್ಪಿಸಿದೆಯಾದರೆ ಅತ್ಯುತ್ತಮ ಫಲಗಳನ್ನು ಪಡೆಯುವೆ. ಅತ್ಯದ್ಭುತ ಕಲಾಕೃತಿಗಳು ಸೃಷ್ಟಿಯಾಗಬಹುದು.

ಈ ಮೇಲಿನ ಮಾತುಗಳು 'ಸೀಸದ ಕಡ್ಡಿಗೆ ಮಾತ್ರವಲ್ಲ' ನಮ್ಮ ನಿಜ ಜೀವನಕ್ಕೂ ಅನ್ವಯಿಸುತ್ತವೆ. ಮುಖ್ಯವಾದ ಹಾಗೂ ಅಮೂಲ್ಯವಾದ ಸದ್ಗುಣಗಳು ನಮ್ಮಲ್ಲಡಗಿದ್ದರೂ ಸಹ ಅನೇಕ ಬಾರಿ ಹೊರಬರುವುದೇ ಇಲ್ಲ. ನಮಗೇ ಅರಿವಿರುವುದಿಲ್ಲ, ಬೂದಿ ಮುಚ್ಚಿದ ಕೆಂಡದಂತೆ ಪ್ರತಿಭೆಗಳು ಪ್ರಕಾಶವಾಗುವುದೇ ಇಲ್ಲ ಅನೇಕ ಬಾರಿ!

ಅಲ್ಪಕಾಲಿಕ ಲಾಭ, ಯಶಸ್ಸಿಗೆ ಮರುಳಾಗದೆ, ದೀರ್ಘಕಾಲಿಕ ಸಫಲತೆಗೆ ಗುರಿಯಿತ್ತು ಸತ್ಯ, ಸಚ್ಚಾರಿತ್ರೆ ನಡೆ–ನುಡಿಯ ಜೀವನ ನಡೆಸಬೇಕಾದರೆ 'ಶಿಸ್ತು' ನಮ್ಮ ಜೀವನದ ಅಂಗವಾಗಬೇಕು. 'ಸೀಸದ ಕಡ್ಡಿ'ಯ 'ಸೀಸ' ಆಧ್ಯಾತ್ಮಿಕ ಹೊನ್ನಿನ ಬೆಳಕು ಚೆಲ್ಲಿದೆ ಎಂದನ್ನಿಸುವುದು ಅಲ್ಲವೇ? ನಿಮ್ಮ ಅಭಿಪ್ರಾಯವೇನು? ●

## ಜೀವನ

ಈ ಜಗತ್ತೇ ಸಾಕೆನಿಸಿದಾಗ
ನನಗೆ ಪರಿಚಯವಾದ
ಹೊಸ ಪರಿಚಯ ನೀನು
ನಗುವನ್ನೇ ಮರೆತಾಗ
ನನ್ನಲ್ಲಿ ಮೂಡಿದ
ಮುಗುಳ್ನಗೆ ನೀನು
ನನ್ನಿ ಪರಿಮಿತ ಬದುಕಿನಲ್ಲಿ
ಅಪರಿಮಿತ ಸಂತೋಷ ನೀನು

## ಶಾಶ್ವತ

ಹುಡುಕುವ ಪ್ರೀತಿಗಿಂತ
ಜೊತೆಗಿರುವ ಸ್ನೇಹ ಚೆಂದ
ಕಾಣುವ ಕನಸಿಗಿಂತ
ಕಾಣದಿರುವ ಕಲ್ಪನೆ ಚೆಂದ
ಬರೆಯುವ ಬರಹಕ್ಕಿಂತ
ಅಳಿಸಲಾಗದ ನೆನಪು ಚೆಂದ

✍ ಕುಮಾರಿ ನಂದಿನಿ ಗೌಡ
ಹತ್ತನೆಯ ತರಗತಿಯ ವಿದ್ಯಾರ್ಥಿನಿ
ಚೆಂಬೂರು ಕರ್ನಾಟಕ ಪ್ರೌಢ ಶಾಲೆ

# ಮುಂಬಯಿ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭ:

## ವಿಕ್ರಮ್ ಜೋಶಿ ಅವರಿಗೆ ಎಂ. ಬಿ. ಕುಕ್ಯಾನ್ ಚಿನ್ನದ ಪದಕ ಪ್ರದಾನ

ಮುಂಬೈ ವಿಶ್ವವಿದ್ಯಾಲಯದ 2025ರ ಸಾಲಿನ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವು ಜನವರಿ 17ರಂದು ಶನಿವಾರ ಬೆಳಿಗ್ಗೆ ಫೋರ್ಟ್ ಆವರಣದಲ್ಲಿರುವ ಸರ್ ಕೋವಾಸ್ಜಿ ಜಹಾಂಗೀರ್ ಕನ್ವೊಕೇಷನ್ ಹಾಲ್‌ನಲ್ಲಿ ಬಹು ವಿಜೃಂಭಣೆಯಿಂದ ಸಂಪನ್ನಗೊಂಡಿತು. ಇದೇ ಸಂದರ್ಭದಲ್ಲಿ ಮುಂಬಯಿ ವಿಶ್ವವಿದ್ಯಾಲಯವು ಕಳೆದ ಅಗಸ್ಟ್ ತಿಂಗಳಿನಲ್ಲಿ ನಡೆಸಿದ ಎಂ.ಎ. ಪರೀಕ್ಷೆಯಲ್ಲಿ ಸರ್ವಾಧಿಕ ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದ ಕನ್ನಡ ವಿಭಾಗದ ವಿದ್ಯಾರ್ಥಿ ವಿಕ್ರಮ ಜೋಶಿ ಅವರಿಗೆ ಎಂ. ಬಿ. ಕುಕ್ಯಾನ್ ಚಿನ್ನದ ಪದಕವನ್ನು ಭಾರತ ಸರಕಾರದ ಪ್ರಧಾನ ಮಂತ್ರಿಗಳ ಮುಖ್ಯ ವಿಜ್ಞಾನ ಸಲಹೆಗಾರರಾಗಿರುವ ಪ್ರೊಫೆಸರ್ (ಡಾ.) ಅಜಯ್ ಕುಮಾರ್ ಸೂದ್  ಅವರು ಪ್ರದಾನ ಮಾಡಿದರು.



ಭಾರತದ ಮೊತ್ತ ಮೊದಲ ಮೂರು ವಿಶ್ವವಿದ್ಯಾಲಯಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯವೂ ಒಂದು. ಸರದಾರ್ ಪಟೇಲ್, ಹೋಮಿ ಬಾಬ, ಮಹಾತ್ಮ ಗಾಂಧಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮುಂತಾದ ಮಹಾನ್ ವ್ಯಕ್ತಿಗಳನ್ನೊಳಗೊಂಡು ಎಂಟು ಭಾರತ ರತ್ನರು ಮತ್ತು ಲೆಕ್ಕಾತೀತ ಪದ್ಮಶ್ರೀಗಳು ಕಲಿತು ನಡೆದ ವಿಶ್ವವಿದ್ಯಾಲಯ ಇದಾಗಿದೆ. ದೇಶದಲ್ಲಿ ಹಾಗೂ ವಿದೇಶದಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಅದರದ್ದೇ ಆದ ಒಂದು ವರ್ಚಸ್ಸಿದೆ. ನೂರಾ ಅರವತ್ತೊಂಬತ್ತು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವ ಮುಂಬಯಿ ವಿಶ್ವವಿದ್ಯಾಲಯದ ವಾರ್ಷಿಕ ಘಟಕೋತ್ತವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಲು ಅವಕಾಶ ದೊರಕಿದ್ದು ತಮ್ಮ ಭಾಗ್ಯ ಎಂದು ಪ್ರೊ. ಸೂದ್ ಅವರು ಅಭಿಪ್ರಾಯ ಪಟ್ಟರು.

ಡಾ. ಅಜಯ್ ಕುಮಾರ್ ಸೂದ್ ಅವರು ತಮ್ಮ  ಭಾಷಣದಲ್ಲಿ ಘಟಕೋತ್ಸವದಂದು ಪದವಿ, ಪಿಎಚ್‌ಡಿ ಹಾಗೂ ಚಿನ್ನದ ಪದಕವನ್ನು ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಾ ಮುಂಬಯಿ ವಿಶ್ವವಿದ್ಯಾಲಯದ ಪರಂಪರೆ ಹಾಗೂ ಅದರ ಜೊತೆ ಬರುವ ಜವಾಬ್ದಾರಿಯನ್ನು ಸೂಚ್ಯವಾಗಿ ತಿಳಿಸಿದರು. ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಬೇಕಾದರೆ ಮೂರು ಮುಖ್ಯ ಅಂಶಗಳನ್ನು ಗಮನದಲ್ಲಿಡಬೇಕು. ಜಿಜ್ಞಾಸೆಯನ್ನು ಹುಟ್ಟಿಸುವಂತಹ ಬೋಧನೆ, ಪರಿಕಲ್ಪನೆಯ ತಿಳುವಳಿಕೆ, ಹಾಗೂ ಮೂಲದಲ್ಲಿ ಪ್ರಯೋಗಗಳು– ಇವು ಅವರು ಸೂಚಿಸಿದ ಆ ಮೂರು ಅಂಶಗಳು. ಭಾರತದಲ್ಲಿ ಉದ್ಯೋಗಶೀಲತೆಯು 56.35% ಗೆ ಏರಿದ್ದು, ಅದರಲ್ಲಿ ಮೊತ್ತ ಮೊದಲ ಬಾರಿಗೆ ಮಹಿಳೆಯರ ಪಾಲು 54% ತಲುಪಿದ್ದು ಇಡೀ ದೇಶವೇ ಹೆಮ್ಮೆ ಪಡುವ ವಿಷಯವಾಗಿದೆ ಎಂದರು. ಉತ್ಕೃಷ್ಟ ಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಸಲುವಾಗಿ ಅವರು ಫ್ರೇಮ್ವರ್ಕ್ಸ್ನ್ನು ವಿವರಿಸಿದರು. ಅದರಲ್ಲಿ S ಅಂದರೆ ಸೈನ್ಸ್ ಇನ್ ಲೈಫ್, L ಅಂದರೆ ಲ್ಯಾಬ್ಸ್ ರಿವೈಟಲೈಸ್ಡ್, I ಅಂದರೆ ಇಂಟಿಗ್ರೇಷನ್, ಅಂದರೆ ಫೆಸ್ಟಿವಲ್ ಹಾಗೂ ಅಂದರೆ ಎಂಗೇಜ್ಮೆಂಟ್. ತಮ್ಮ ಭಾಷಣದಲ್ಲಿ ಅವರು ಕೇಂದ್ರದ ಶಿಕ್ಷಣ ಸಚಿವಾಲಯ ಹಾಗೂ ಪ್ರಿನ್ಸಿಪಲ್ ಸೈಂಟಿಫಿಕ್ ಅಡ್ವೈಸರ್ ಕಛೇರಿಯು ಜಂಟಿಯಾಗಿ ಕಾರ್ಯರೂಪಕ್ಕೆ ತಂದ 'ಒನ್ ನೇಷನ್ ಒನ್ ಸಬ್ಸ್ಕ್ರಿಪ್ಷನ್  ಯೋಜನೆಯನ್ನು ವಿವರಿಸಿದರು. ಇದರಿಂದಾಗಿ ಭಾರತದ 1.8 ಕೋಟಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಲಾಭವಾಗಿದೆ ಎಂಬ ವಿಷಯವನ್ನು ಹೇಳಿದರು.

ತಮ್ಮ ಕನ್ವೊಕೇಷನ್ ಭಾಷಣದಲ್ಲಿ ಮುಖ್ಯವಾಗಿ ಅವರು ಭಾರತದ ಡಿಜಿಟಲ್ ತಂತ್ರಜ್ಞಾನದ ನಾಯಕತ್ವವನ್ನು ಶ್ಲಾಘಿಸಿದರು. ಕಳೆದ ಡಿಸೆಂಬರ್ ಒಂದೇ ತಿಂಗಳಲ್ಲಿ ಭಾರತವು 21.6 ಬಿಲಿಯನ್ ಯುಪಿಐ ವ್ಯವಹಾರವನ್ನು ನಡೆಸಿದ್ದು ಅದರಲ್ಲಿ ವರ್ಗಾವಣೆಯಾದ ಮೊತ್ತವು ಸುಮಾರು 28 ಟ್ರಿಲಿಯನ್ ರೂಪಾಯಿಗಳು ಎನ್ನುವ ಅವರು ಹೇಳಿದ ವಿಷಯವು ಸಭಿಕರಲ್ಲಿ ಅಚ್ಚರಿಯ ಅಲೆಯನ್ನು ಸೃಷ್ಟಿಸಿತು. ಅವರು ಹೇಳಿದಂತೆ ಭಾರತವು ಕೃತಕ ಬುದ್ಧಿಮತ್ತೆ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಯುಪಿಐ 1.0ರಿಂದ ಡಿಪಿಐ 2.0ಕಡೆ ದಾಪುಗಾಲಿಡಿತ್ತುರುವುದು ಭಾರತೀಯರಾದ ನಮಗೆ ಅತ್ಯಂತ ಸಂತೋಷದ ವಿಷಯವಾಗಿತ್ತು.

ಮಹಾರಾಷ್ಟ್ರ ಸರಕಾರದ ಸಂಸದೀಯ ವ್ಯವಹಾರ, ಉನ್ನತ ಹಾಗೂ ತಾಂತ್ರಿಕ ಶಿಕ್ಷಣ ಸಚಿವರಾದ ಶ್ರೀ ಚಂದ್ರಕಾಂತ್ ಪಾಟೀಲ್ ಅವರು ಸಮಾರಂಭದ ಗೌರವಾಧ್ಯಕ್ಷ ಸ್ಥಾನವನ್ನು ವಹಿಸಿದ್ದರು. 2025ನೆಯ ಸಾಲಿನ ಘಟಕೋತ್ಸವದ ಚುಕ್ಕಾಣಿಯನ್ನು ಹಿಡಿದು ನಡೆಸಿದವರು ಈ ಕಾರ್ಯಕ್ರಮದ ಅಧ್ಯಕ್ಷರಾದ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಆಗಿರುವ ಪ್ರೊಫೆಸರ್ (ಡಾ.) ರವೀಂದ್ರ ಕುಲಕರ್ಣಿಯವರು.

ಸುಮಾರು ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಘಟಕೋತ್ಸವದ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ವಿಭಿನ್ನ ವಿಭಾಗದ ಪ್ರಾಚಾರ್ಯರು, ವಿದ್ಯಾರ್ಥಿಗಳು, ರೆಜಿಸ್ಟ್ರಾರ್ ಹಾಗೂ ಪರೀಕ್ಷಾ ವಿಭಾಗದ ನಿರ್ದೇಶಕರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಚೆಂದಗಾಣಿಸಿಕೊಟ್ಟರು. ಈ ಬಾರಿಯ ಘಟಕೋತ್ಸವದಲ್ಲಿ 1,72,522 ವಿದ್ಯಾರ್ಥಿಗಳಿಗೆ ಪದವಿಯನ್ನು, 602 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿಯನ್ನು ಹಾಗೂ ಕನ್ನಡವೂ ಸೇರಿದಂತೆ 21 ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ಪ್ರದಾನಮಾಡಲಾಯಿತು. ವಿಶ್ವವಿದ್ಯಾಲಯದ ಸಹಾಯಕ ಕುಲಪತಿಗಳಾದ ಡಾ. ಅಜಯ್ ಬಾಂಬ್ರೆ  ಅವರು ಕಳೆದ ಒಂದು ವರ್ಷದಲ್ಲಿ ವಿಶ್ವವಿದ್ಯಾಲಯವು ಮಾಡಿದ ಸಾಧನೆಯನ್ನು ವಿವರವಾಗಿ ಹೇಳಿದರು. ಹಾಗೆಯೇ ಉಪಕುಲಪತಿಗಳಾದ ಡಾ. ರವೀಂದ್ರ ಕುಲಕರ್ಣಿಯವರು ವಿಶ್ವವಿದ್ಯಾಲಯದ ಭವಿಷ್ಯದ ಯೋಜನೆಗಳನ್ನು ಅಲ್ಲಿ ನೆರೆದಿದ್ದ ಸಭಿಕರ ಹಾಗೂ ಅತಿಥಿಗಳ ಮುಂದೆ ತೆರೆದಿಟ್ಟಿದ್ದು ಗಮನೀಯ ಆಂಶ. ಮುಂದಿನ ವರ್ಷ ವಿಶ್ವವಿದ್ಯಾಲಯವು 170ನೆಯ ವರ್ಷಕ್ಕೆ ಹೆಜ್ಜೆಯನ್ನು ಹಾಕುತ್ತಿದ್ದು ಅದಕ್ಕೆ ತಕ್ಕನಾದ ಯೋಜನೆಗಳನ್ನೂ ಕೂಡ ಉಪಕುಲಪತಿಗಳು ಹಂಚಿಕೊಂಡರು. ಗೌರವ ಅತಿಥಿಯಾಗಿ ಆಗಮಿಸಿದ್ದ ಮಹಾರಾಷ್ಟ್ರ ಸರ್ಕಾರದ ಸಚಿವರಾದ ಶ್ರೀ ಚಂದ್ರಕಾಂತ ಪಾಟೀಲ್ ಅವರು ಘಟಕೋತ್ಸವದ ಮಹತ್ವ, ***(ಪುಟ 18ಕ್ಕೆ)***

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ: ವಿಶೇಷ ಉಪನ್ಯಾಸ ಕಾರ್ಯಕ್ರಮ

# ಛಂದಸ್ಸು ಕಾವ್ಯಕ್ಕೆ ಸೌಂದರ್ಯವನ್ನು ತಂದುಕೊಡುತ್ತದೆ : ಡಾ. ಶ್ಯಾಮಲಾ ಪ್ರಕಾಶ್

ತ್ರಿಪದಿ ಕನ್ನಡದ ದೇಸೀ ಛಂದಸ್ಸು.ಇದು ಜಾನಪದದಲ್ಲಿ ಶ್ರೀಮಂತಿಕೆಯನ್ನು ಪಡೆದ ಮಟ್ಟು. ಕನ್ನಡದ ಮೊಟ್ಟ ಮೊದಲಿನ ತ್ರಿಪದಿಗಳು ಅಂಶ ಛಂದಸ್ಸಿನಲ್ಲಿವೆ. ಪಂಪ ಪೊನ್ನ ಚಾವುಂಡರಾಯ ಹೀಗೆ ಅನೇಕ ಕವಿಗಳ ಕಾವ್ಯಗಳಲ್ಲಿ ತ್ರಿಪದಿಗಳು ಕಾಣಸಿಗುತ್ತವೆ. ಯಾವುದೇ ಭಾಷೆಯ ಕವಿ ಕಂದವನ್ನು ಬಳಸಿದರೂ ಅದರಲ್ಲಿ ಕನ್ನಡದ ಪದ ಇದ್ದೇ ಇರುತ್ತದೆ. ಶಾಸನ ಸಾಹಿತ್ಯದಲ್ಲೂ ಷಟ್ಪದಿ ಸಿಕ್ಕಿದೆ. ಷಟ್ಪದಿ ಕಾವ್ಯಗಳು ನಮ್ಮ ಸಾಹಿತ್ಯವನ್ನು ಆಳಿವೆ. ಜೈನ ಕವಿಗಳು ಕಾಲಧರ್ಮಕ್ಕೆ ಅನುಗುಣವಾಗಿ ಸಾಂಗತ್ಯವನ್ನು ಬಳಸಿದರು. ಕನ್ನಡ ಕವಿಗಳು ಪದ್ದಳಿಯನ್ನು ಕನ್ನಡ ಕಾವ್ಯಗಳಲ್ಲೂ ಪ್ರಾರ್ಥನೆಯ ಸಂದರ್ಭಗಳಲ್ಲಿ ಬಳಸಿದ್ದಾರೆ ಎಂದು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಶ್ಯಾಮಲಾ ಪ್ರಕಾಶ್ ಅವರು ನುಡಿದರು.




ಅವರು ಜ. 7ರಂದು ಕಲೀನಾ ಕ್ಯಾಂಪಸ್ನ ರಾನಡೆ ಭವನದಲ್ಲಿ ಕನ್ನಡ ವಿಭಾಗವು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತ ತ್ರಿಪದಿ ಷಟ್ಪದಿ ರಗಳೆ ಸಾಂಗತ್ಯ ಇತ್ಯಾದಿ ಕನ್ನಡ ದೇಸೀ ಛಂದಸ್ಸುಗಳ ಕುರಿತು ಮತ್ತು ಕನ್ನಡದ ಕವಿ ಕಾವ್ಯಗಳ ಸಂಗೀತ ವಿಚಾರವಾದ ಮಾಹಿತಿ ನೀಡುವುದರೊಂದಿಗೆ ಅವುಗಳ ಗಮಕ ಪ್ರಸ್ತುತಿಯನ್ನು ಸಾದರಪಡಿಸಿದರು. ಛಂದಸ್ಸು ಕಾವ್ಯಕ್ಕೆ ಸೌಂದರ್ಯವನ್ನು ತಂದುಕೊಟ್ಟಿದೆ; ಓದುಗರಿಗೂ ಹಾಡುಗಾರರಿಗೂ ಛಂದಸ್ಸು ಯುಕ್ತ ಕಾವ್ಯ ಸಂತೋಷವನ್ನುಂಟುಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಅವರು ನುಡಿದರು.

ಕಾರ್ಯಕ್ರಮಕ್ಕೆ ಪ್ರಸ್ತಾವನೆಗೈದ ಕನ್ನಡ ವಿಭಾಗದ ಪ್ರಮುಖರು ಮತ್ತು ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜಿ. ಎನ್. ಉಪಾಧ್ಯ ಅವರು ಮಾತನಾಡಿ, ಕನ್ನಡ ಭಾಷೆಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ ಇದೆ. ಕನ್ನಡ ಸಾಹಿತ್ಯ ಆರಂಭವಾದುದು ಜಾನಪದ ಹಿನ್ನೆಲೆಯ ತ್ರಿಪದಿಯಿಂದ. ಕನ್ನಡ ಸಾಹಿತ್ಯದ ಕುರಿತು ಮಾತನಾಡುವಾಗ ಕನ್ನಡದ ದೇಸೀ ಮಟ್ಟುಗಳು ಮುಖ್ಯವಾಗುತ್ತವೆ. ಕನ್ನಡ ಸಾಹಿತ್ಯದ ವೈವಿಧ್ಯಕ್ಕೆ ಕಾರಣ ಕನ್ನಡದ ಛಂದೋ ಮಟ್ಟುಗಳು ಎಂದು ಡಾ. ಡಿ. ಎಸ್. ಕರ್ಕಿಯವರು ಉಲ್ಲೇಖಿಸುತ್ತಾರೆ. 1956ರಲ್ಲಿ ಬೆಳಕು ಕಂಡ ಅವರ ಛಂದೋವಿಕಾಸಕ್ಕೆ ಈಗ ಎಪ್ಪತ್ತರ ಸಂಭ್ರಮ. ನಿಜವಾಗಿಯೂ ಛಂದೋ ವೈವಿಧ್ಯದಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ಹರಿಹರ ರಗಳೆಯ ಮೂಲಕ ಜನಸಾಮಾನ್ಯರನ್ನು ಕಾವ್ಯದ ನಾಯಕರನ್ನಾಗಿಸಿದರೆ, ರಾಘವಾಂಕ ಷಟ್ಪದಿಗಳನ್ನು ರಚಿಸಿ ಕಾವ್ಯದಲ್ಲಿ ಬೇರೆ ರೀತಿಯ ಪ್ರಯೋಗವನ್ನು ಮಾಡಿದವನು. ವಚನ ಸಾಹಿತ್ಯ, ದಾಸಸಾಹಿತ್ಯ ಕೂಡ ತಮ್ಮದೇ ಆದ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿವೆ ಎಂದರು. ಮರಾಠಿ, ಹಿಂದಿ ಮೊದಲಾದ ಭಾಷೆಗಳಲ್ಲಿ ಈ ಮಾದರಿಯ ಪ್ರಯೋಗ ಕಡಿಮೆ. ಕನ್ನಡ ದೇಸೀ ಛಂದೋ ಮಟ್ಟುಗಳ ಬಗೆಗೆ ಗಮಕ ಪ್ರಸ್ತುತಿಯನ್ನು ಮಾಡುವ ಡಾ. ಶ್ಯಾಮಲಾ ಪ್ರಕಾಶ್ ಅವರು ನಾದೋಪಾಸನೆ ಮಾಡುತ್ತ ಸಾಹಿತ್ಯದ ಅನುಸಂಧಾನ ನಡೆಸಿದವರು. ಕನ್ನಡ ವಿಭಾಗದ ಗರಿಮೆಯನ್ನು ಹೆಚ್ಚಿಸಿ ಮಾತು ಕೃತಿಗಳ ಮೂಲಕ ವಿದ್ವತ್ ವಲಯದಲ್ಲಿ ಸಂಚಲನವನ್ನು ಉಂಟು ಮಾಡಿದವರು ಎಂದು ಅವರನ್ನು ಸ್ವಾಗತಿಸಿದರು.

ಅನಂತರ ಅತಿಥಿಯೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಸಂಶೋಧನ ವಿದ್ಯಾರ್ಥಿಗಳಾದ ಕಲಾ ಭಾಗ್ವತ್, ಸುರೇಖಾ ದೇವಾಡಿಗ, ಸುರೇಖಾ ಶೆಟ್ಟಿ, ಪ್ರತಿಭಾ ರಾವ್, ಸವಿತಾ ಅರುಣ್ ಶೆಟ್ಟಿ, ವಿದ್ಯಾ ರಾಮಕೃಷ್ಣ, ಆಶಾ ಸುವರ್ಣ, ಡಿಪ್ಲೊಮಾ ವಿದ್ಯಾರ್ಥಿಗಳಾದ ಪುಷ್ಪಲತಾ ಗೌಡ, ಯೋಗಿನಿ ಅತ್ರೇಯ, ಚಿತ್ರಾ ರಾವ್ ಮೊದಲಾದವರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಡಾ. ಶ್ಯಾಮಲಾ ಅವರನ್ನು ಶಾಲು ಹೊದಿಸಿ ಕೃತಿಯೊಂದಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ್ ಶೆಟ್ಟಿ ಅವರು ಸಂಯೋಜಿಸಿ ನಿರೂಪಿಸಿದರು. ●


## ಚಿನ್ನದ ಪದಕ ಪ್ರದಾನ....

ಈ ಘಟಕೋತ್ಸವದ ಭಾಗವಾಗಿದ್ದ ಕೆಲವು ಐತಿಹಾಸಿಕ ಮಹಾಪುರುಷರ ಹೆಸರು ಹಾಗೂ ಮುಂದಿನ ಪೀಳಿಗೆಯ ಮೇಲಿರುವ ಜವಾಬ್ದಾರಿಯನ್ನು ತಮ್ಮ ಭಾಷಣದಲ್ಲಿ ಹೇಳಿದರು. ತಮ್ಮ ಭಾಷಣದಲ್ಲಿ ಹತ್ತು ವರ್ಷಗಳ ಹಿಂದೆ ಆರ್ಥಿಕತೆಯಲ್ಲಿ ಹನ್ನೊಂದನೆಯ ಸ್ಥಾನವನ್ನು ಹೊಂದಿದ್ದ ಭಾರತವು ಇಂದು ನಾಲ್ಕನೆಯ ಸ್ಥಾನದಲ್ಲಿದೆ; 2047ರಲ್ಲಿ ವಿಕಸಿತ ಭಾರತವಾಗುವ ಗುರಿಯನ್ನು ಹೊಂದಿರುವ ಭಾರತವು ಆರ್ಥಿಕತೆಯಲ್ಲಿ ಮೊದಲನೆಯ ಸ್ಥಾನವನ್ನು ಪಡೆಯಲಿದೆ ಎನ್ನುವ ಆಶಾಭಾವದ ನುಡಿಯನ್ನಾಡಿದರು.

ವಾರ್ಷಿಕ ಘಟಿಕೋತ್ಸವದಲ್ಲಿ ನೆರೆದಿದ್ದ ಅತಿಥಿಗಳ ಸಮ್ಮುಖದಲ್ಲಿ ಈ ಪದಕವನ್ನು ಪ್ರೊಫೆಸರ್ ಅಜಯ್ ಕುಮಾರ್ ಸೂದ್ ಅವರು ಪದಕವನ್ನು ಪ್ರದಾನ ಮಾಡಿದರು. ಪ್ರತಿವರ್ಷದಂತೆ ಘಟಕೋತ್ಸವವು ಪರೇಡ್‌ನಿಂದ ಶುರುವಾಗಿ, ಅದರಿಂದಲೇ ಮುಕ್ತಾಯಗೊಂಡಿತು. ಕಾರ್ಯಕ್ರಮದ ಕೊನೆಯಲ್ಲಿ ಮೊಳಗಿದ ವಂದೇ ಮಾತರಂ ಹಾಡು ಅಲ್ಲಿದ್ದ ಸಭಿಕರನ್ನು ಮನಮುಗ್ಧಗೊಳಿಸಿತು.

ಕನ್ನಡ ವಿಭಾಗದ ಮುಖ್ಯಸ್ಥ, ಪ್ರಾಧ್ಯಾಪಕ ಪ್ರೊ. ಜಿ. ಎನ್. ಉಪಾಧ್ಯ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಮನಿಷಾ ರಾವ್, ವಿವಿಧ ನಿಕಾಯ ಗಳ ಡೀನ್ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ನಿತಿನ್ ಅರೇಕರ್ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ●

# ಮೈಸೂರು ಅಸೋಸಿಯೇಷನ್‌ನಲ್ಲಿ ಗಣರಾಜ್ಯೋತ್ಸವ



ಮುಂಬೈನ ಮೈಸೂರು ಅಸೋಸಿಯೇಷನ್‌ನಲ್ಲಿ ಭಾರತದ 77ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಅಸೋಸಿಯೇಷನ್‌ನ ಹಿರಿಯ ಸದಸ್ಯೆ ಶ್ರೀಮತಿ ಸುಶೀಲಮ್ಮ ರಾಮಣ್ಣ ಅವರು ರಾಷ್ಟ್ರ ಧ್ವಜವನ್ನು ಹಾರಿಸಿ, ಧ್ವಜ ವಂದನೆ ನೆರವೇರಿಸಿದರು. ಈ ಶುಭ ಸಂದರ್ಭದಲ್ಲಿ ನೆರೆದಿದ್ದ ಸದಸ್ಯರು ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಿದರು. ಅಸೋಸಿಯೇಷನ್‌ನ ಶತಮಾನೋತ್ಸವದ ಸಂಭ್ರಮದ ನಡುವೆ ನಡೆದ ಈ ಧ್ವಜ ವಂದನೆ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿತ್ತು. ನೆರೆದಿದ್ದ ಎಲ್ಲರಿಗೂ ಸಿಹಿ ಹಂಚುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



## ಮುಂಬರುವ ಕಾರ್ಯಕ್ರಮಗಳು

**ಮೈಸೂರು ಅಸೋಸಿಯೇಷನ್, ಮುಂಬೈ ಮತ್ತು ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ**

ಇವರು ಜೊತೆಗೂಡಿ ನಡೆಸುವ

## ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆ –2026

**ಉಪನ್ಯಾಸಕರು : ಡಾ. ಕೃಷ್ಣ ಕೊಲ್ಹಾರ್ ಕುಲಕರ್ಣಿ**

**ಶನಿವಾರ, ಮಾರ್ಚ್ 14, 2026 ಸಂಜೆ 6.00 ರಿಂದ**

**ಹಾಗೂ**

**ಭಾನುವಾರ ಮಾರ್ಚ್ 15, 2026 ಬೆಳಿಗ್ಗೆ 11.00 ರಿಂದ**

ಸ್ಥಳ : ಮೈಸೂರು ಅಸೋಸಿಯೇಷನ್ ಕಿರು ಸಭಾಗೃಹ, 393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬೈ–400 019.

****

**ಮಾರ್ಚ್ 28, 2026 ರಂದು ಸಂಜೆ 5.00 ರಿಂದ**

## ಕವಿಗೋಷ್ಠಿ

**ಹಾಗೂ**

**ಶತಮಾನೋತ್ಸವದ ಪ್ರಯುಕ್ತ ನಡೆಸಲಾದ ನಾಟಕ ರಚನೆ, ಸಣ್ಣ ಕಥೆ ಹಾಗೂ ಶಿಶುಕವನ ಸ್ಪರ್ಧೆಗಳ**

## ಬಹುಮಾನ ವಿತರಣಾ ಸಮಾರಂಭ

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay

Centenary Year (1926 - 2026)



# ಶ್ರೀರಂಗ ರಂಗೋತ್ಸವ

## ಮೂರು ದಿನಗಳ ಕನ್ನಡ ನಾಟಕೋತ್ಸವ

### ನಾಟಕ ಅಕಾಡೆಮಿ ಬೆಂಗಳೂರು

**ಇವರಿಂದ**

ಸಹ ಪ್ರಾಯೋಜಕರು : **ಶ್ರೀಮತಿ ಉಷಾ ದೇಸಾಯಿ**

| | |
|---|---|
| **ಶುಕ್ರವಾರ, 27.02.2026**<br>**ಸಂಜೆ 6.30ಕ್ಕೆ** | <br>ನಾಟಕ : **ಈಡಿಪಸ್**<br>ನಿರ್ದೇಶನ : **ಶಶಿಧರ್ ಭಾರೀಘಾಟ್**<br>ರಚನೆ : **ಪಿ. ಲಂಕೇಶ್** |
| **ಶನಿವಾರ, 28.02.2026**<br>**ಸಂಜೆ 6.30ಕ್ಕೆ** | <br>ನಾಟಕ : **ಕಾಲಜ್ಞಾನಿ ಕನಕ**<br>ನಿರ್ದೇಶನ: **ಸಿ. ಜಿ. ಕೆ**<br>ಮರು ನಿರ್ದೇಶನ : **ಟಿ ಟಿ. ರಘು**<br>ರಚನೆ : **ಕಿ. ರಂ. ನಾಗರಾಜ** |
| **ರವಿವಾರ, 01.03.2026**<br>**ಸಂಜೆ 6.30ಕ್ಕೆ** | <br>ನಾಟಕ : **ಮೌನಿ**<br>ಕಥೆ : **ಡಾ. ಯು. ಆರ್ ಅನಂತಮೂರ್ತಿ**<br>ನಿರ್ದೇಶನ : **ಡಾ. ಕೆ. ವಿ. ನಾಗರಾಜ ಮೂರ್ತಿ** |

## ಮಹಾಶಿವರಾತ್ರಿ ಪೂಜೆ ಮತ್ತು ಭಜನೆ

### ಪ್ರಸಾದ ವಿನಿಯೋಗ

**ರವಿವಾರ 15.02.2026 । ಸಮಯ : ಸಂಜೆ 5.30ಕ್ಕೆ**

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ, 393, ಭಾವು ದಾಜಿ ರಸ್ತೆ, ಮಾಟುಂಗ – 400 019



Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077